
ಕೊರವಂಜಿ



Koravanji

ಆಕ್ಟೋಬರ್ ೧೯೪೫
ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ ಆರ್. ಕೆ. ಲಕ್ಷ್ಮಣ್

ಬರಹಗಾರರು :
ಶ್ರೀ|| ರುದ್ರಮ್ಮ
ಶ್ರೀ|| ' ಅಕ್ರೂರ ''
ಶ್ರೀ|| ಜಿ. ಪಿ. ಸು.
ಶ್ರೀ|| ಖಾರಾಂತ
ಶ್ರೀ|| ವಸುದೇವ ಭೂಪಾಲಂ
ಇತ್ಯಾದಿ, ಇತ್ಯಾದಿ.

ಬಿಡಿ ಪತ್ರಿಕೆ - - ಕೇವಲ ಎರಡಾಣೆ

ತಿಳಿನಗೆಯ ಮಾಸಪತ್ರಿಕೆ

ಕೊರವಂಜಿ

ವಿಷಯಾನುಕ್ರಮಣಿಕೆ



"ನೋಡಿ, ನನಗೆ ಗೊತ್ತು, ಈ ವರ್ಷ ನನಗೆ 55 ವರ್ಷ ತುಂಬಿ ನನ್ನ ಕೆಲಸದಿಂದ ವಿಶ್ರಾಂತನಾದೆ ಆದರೆ ಆ ವಿಚಾರದಲ್ಲಿ ನನಗೆ ಸ್ವಲ್ಪವಾದರೂ ಕಳವಳವುಂಟಾಯಿತೇ? ಇಲ್ಲವೇ ಇಲ್ಲ ಉದ್ಯೋಗದಿಂದ ನಿವೃತ್ತನಾದಾಗ, ದುಡ್ಡಿನ ತಾಪತ್ರಯವಿಲ್ಲದಿರುವುದಕ್ಕಾಗಿ, ತಕ್ಕಷ್ಟು ಹಣವನ್ನು ಕೂಡಿಟ್ಟಿದ್ದೆ ನಾನು ಹೇಗೆ ಕೂಡಿಡಲು ಸಾಧ್ಯವಾಯಿತು? ಇದು ಅತಿ ಸುಲಭ ನಾನು ಚಿಕ್ಕವನಾಗಿದ್ದಾಗಲೇ, ಉಳಿತಾಯ ಮಾಡುವದನ್ನು ಅಭ್ಯಾಸ ಮಾಡಿದೆ ಆಗ ನನಗೇನೂ ಭಾರೀ ಪಗಾರ ಬರುತ್ತಿರಲಿಲ್ಲ. ಆದಾಗ್ಯೂ ಪ್ರತಿ ತಿಂಗಳೂ ಸ್ವಲ್ಪವಾದರೂ ಉಳಿಸಿ, ಸುರಕ್ಷಿತ ಮಾರ್ಗಗಳಲ್ಲಿ ಶೇಖರಿಸುತ್ತಿದ್ದೆ.

ಒಂದೇ ಗಂಟಿನಲ್ಲಿ ರೂ. 1000 ಅಥವಾ ರೂ 5000ವನ್ನು ಮೀಸಲಾಗಿಡುವುದು ಎಲ್ಲರಿಗೂ ಸಾಧ್ಯವಲ್ಲ ಖರ್ಚು ಕಳೆದು ಅಲ್ಪ ಮೊಬಲಗು ಉಳಿಯುವುದಾದರೆ, ಅದನ್ನು ಶೇಖರಿಸುವುದು ನಿಷ್ಫಲವೆಂದು ಜನರು ಅನೇಕ ವೇಳೆ ಭಾವಿಸುತ್ತಾರೆ. ಅದು ಶುದ್ಧ ತಪ್ಪು. ಪರಿಣಾಮದಲ್ಲಿ ದೊಡ್ಡ ಗಂಟು ದೊರೆಯಬೇಕಾದರೆ, ಪ್ರತಿ ತಿಂಗಳೂ ಸ್ವಲ್ಪ ಮೊಬಲಗನ್ನು, ಎಷ್ಟೇ ಅಲ್ಪವಾಗಲೀ, ಕೂಡಿಡುತ್ತಾ ಬರುವ ನಿಯಮವೇ ಇದರ ಮುಖ್ಯ ರಹಸ್ಯ ಕಾಲಕ್ರಮದಲ್ಲಿ ಈ ಅಲ್ಪ ಮೊಬಲಗುಗಳೇ ಗಣ್ಯವಾದ ಮೊಬಲಗಾಗಿ ಪರಿಣಮಿಸಿ, ನಿಮಗೆ ಆಶ್ಚರ್ಯವನ್ನುಂಟುಮಾಡುವವು

ಕ್ರಮವಾದ ಉಳಿತಾಯವೇ ಇದರ ರಹಸ್ಯ. ನಾಳೆಗಾಗಿ ಇಂದಿನ ಹಣವ ಅಂದಾಜು ಮಾಡಿರಿ. ನಿಮ್ಮ ಶಕ್ತ್ಯನುಸಾರ ಉಳಿತಾಯ ಮಾಡಿರಿ.

ಆದರೆ ನೀವು ಈ ರೀತಿ ಕೂಡಿಟ್ಟ ಮೊಬಲಗನ್ನು ಸುರಕ್ಷಿತವಾಗಿಯೂ, ನಿಮಗೆ ಬೇಕಾದಾಗ ದೊರೆಯುವ ಮಾರ್ಗಗಳಲ್ಲಿಯೂ ವಿನಿಯೋಗಿಸಬೇಕೆಂಬುದನ್ನು ಲಕ್ಷ್ಯದಲ್ಲಿಡಿರಿ

ಬಹಳ ಸಣ್ಣ ಮೊಬಲಗುಗಳನ್ನು ಕೂಡ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಗೌರ್ನಮೆಂಟು ಲೋನುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು ವಿಮೆ ಪರಸ್ಪರ ಸಹಾಯಕ ಸಂಘಗಳು, ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು, ಈ ಮಾರ್ಗಗಳಲ್ಲಿ ವಿನಿಯೋಗಿಸಬಹುದು ನಿಮ್ಮ ಹಣವು ಈ ರೀತಿಯಾಗಿ ವಿನಿಯೋಗಿಸಲ್ಪಟ್ಟರೆ, ಭದ್ರವಾಗಿರುವುದಲ್ಲದೆ, ದಿನ ದಿನಕ್ಕೂ ಹೆಚ್ಚುತ್ತಿರುವುದು ವ್ಯಾಪಾರದ ಸರಕುಗಳು, ಕೈಗಾರಿಕೆ ಸಾಮಾನುಗಳು ಆಭರಣಗಳು, ಜಮೀನು ವಗೈರೆ ಆಸ್ತಿ, ಇವುಗಳಲ್ಲಿ ನಿಮ್ಮ ಬಂಡವಾಳವನ್ನು ಹಾಕಿ ನಷ್ಟಕ್ಕೆ ಗುರಿಯಾಗಬೇಡಿರಿ ಇವುಗಳ ಬೆಲೆಯು ಕಡಿಮೆಯಾಗುವ ಸಂಭವವಿರುತ್ತದೆ.

ನಿಮ್ಮ ಭವಿಷ್ಯೋಪಯೋಗಕ್ಕಾಗಿ ಉಳಿತಾಯ ಮಾಡಿ ಸುರಕ್ಷಿತ ಮಾರ್ಗಗಳಲ್ಲಿ ವಿನಿಯೋಗಿಸಿರಿ.

ಗೌರ್ನಮೆಂಟ್ ಆಫ್ ಇಂಡಿಯಾದ ಫಿನಾನ್ಸ್ ಡಿಪಾರ್ಟ್‌ಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ

AAA 152 KN

ಮೂವಿಲ್ಯಾಂಡ್ ನಲ್ಲಿ ಪ್ರದರ್ಶಿಸುವ

ತಾರೀಖು 4-10-1945

ಸಾರಥಿಯವರ ಉತ್ತಮ ದರ್ಜೆಯ ದೃಶ್ಯ

"ಮಾಯಾ ಲೋಕಂ"

ಭೂಮಿಕೆ

ಆಂಧ್ರದೇಶದ ಸುಪ್ರಸಿದ್ಧ ನಟೀನಟರ ಸಮೂಹ

**ಕನ್ನಾಂಬ, ಸಿ. ಎಸ್. ಆರ್. ಆಂಜನೇಯುಲು,
ಕಮಲಾ ಕೋಟ್ನೀಸ್, ಜಿ. ವಿ. ಸುಬ್ಬರಾವ್, ಬೆಜವಾಡ
ರಾಜರತ್ನಂ, ಲಂಕಾ ಸತ್ಯಂ, ಸುಪ್ರಸಿದ್ಧ
ಕನ್ನಡ ತಾರೆ, ಎಂ. ವಿ. ರಾಜಮ್ಮ**

ಇವರೇ ಮೊದಲಾದವರು ನಟಿಸಿರುವರು

—o—

ಪ್ರೊಡ್ಯೂಸರ್ ಮತ್ತು ಚಿತ್ರ ನಿರ್ದೇಶಕರು :

ಜಿ. ರಾಮಬ್ರಂಹಂ


FOR MYSORE STATE, SOUTH CANARA & COORG:

Vijayalakshmi & Co.

BOOKING THROUGH:

A. V. RAMANAMURTY

247, Gandhi Nagar :: Bangalore City



ಸಂಪುಟ ೪ | ಅಕ್ಟೋಬರ್ ೧೯೪೫ | ಸಂಚಿಕೆ ೭

ಕು ಹ ಕಿ ಡಿ ಗ ಳು

ಅಟಾಮಿಕ್ ಬಾಂಬ್, ಹಾಗಿರಲಿ—ನಮ್ಮ ಯುನಾನಿಯವರಿಗೆ ಅನಟಾಮಿಕ್ ಬಾಮ್, ಮೊದಲಿಂದಲೂ ಗೊತ್ತು.

* * *

ರಾಜಾಜಿಯವರು ಕಾಂಗ್ರೆಸ್ಸಿಗೆ ಹಿಂತಿರುಗಿದರು
ನೂನ್ ರವರು ಲೀಗಿಗೆ ಹಿಂತಿರುಗಿದರು.
ನೇವೆಲ್ಲರು ಭಾರತಕ್ಕೆ ಹಿಂತಿರುಗಿದರು.
—ಪುನರಾಯಾನ್ ಎಲ್ಲರೂ !—

* * *

ಯೂರೋಪಿನಲ್ಲಿ "ಹಿಟ್ಲರಿಸಂ" "ಏನ್ಟಿಹಿಟ್ಲರಿಸಂ" ಸಮಸ್ಯೆ ಮುಗಿಯಿತು.— ಆದರೆ ನಮ್ಮ ದೇಶದಲ್ಲಿ ರಾಗಿಹಿಟ್‌ಲರಿಸಂ ಮತ್ತು ಉಪ್ಪಿಟ್‌ಲರಿಸಂ ಸಮಸ್ಯೆ ಎಂದು ಮುಗಿಯುವುದು ಎಂದು ಗುಂಡೂ ಪ್ರಶ್ನೆ.

* * *

ಬರ್ಮಾ ದೇಶಕ್ಕೆ ಅಲ್ಲಿನವರೆಲ್ಲರೂ ಹಿಂತಿರುಗಬಹುದಂತೆ—
—ಅಂದ ಮೇಲೆ ಈ ಚೆಟ್ಟಿಯಾರ್ರಿಲ್ಲಾ.... ?

* * *

ಚೀಮೂರು ಅಷ್ಟಿ ಕೈದಿಗಳಿಗೆ ಜೀವದಾನ ಮಾಡಿದರಂತೆ—
—ಈ ಜೀವದಾನ ಎಲ್ಲೆಲ್ಲೂ ಸಾಂಕ್ರಾಮಿಕ ಜಾಡ್ಯವಾಗುವುದೇ—

* * *

ಮಳಯಾ ದೇಶದಿಂದ ರಬ್ಬರು ಇನ್ನು ಬೇಕಾದ ಹಾಗೆ ಬರುವುದಂತೆ—

ನಮ್ಮ ರಾಜಕಾರಣ ಪಟುಗಳು ಇನ್ನು ಭಾಷಣಗಳನ್ನು ರಬ್ಬರಿನಿಂದಲೇ ಎಳೆಯಬಹುದು, ಬೇಕಾದ ಹಾಗೆ—

* * *

ಹಾರೋಪ್ಲೇನ್ ಕಾರ್ಖಾನೆಯಲ್ಲಿ ಹಳೆಯ ವಿಮಾನಗಳನ್ನು ಸುಡುತ್ತಿದ್ದಾರಂತೆ—
—ಸಧ್ಯ ! ಆ ಮುರುಕಲು ವಿಮಾನಗಳನ್ನು ನಮಗೆ ಮಾರಲಿಲ್ಲವಲ್ಲ !

* * *

"ಯುದ್ಧಾನಂತರದ ಸಮಸ್ಯೆಗಳು." ಭಾಷಣ.
—ನಮ್ಮ ದೇಶದಲ್ಲಿ ಯುದ್ಧ ಈಗ ಶುರು ಅಲ್ಲವೆ !

* * *

ನಮ್ಮ ದೇಶದಲ್ಲಿ ಕೈಗಾರಿಕಾಭಿವೃದ್ಧಿ ಬೇಕಾದಷ್ಟು ನಡೆದಿದೆ—
—ಹೌದು ಚನ್ನಪಟ್ಟಣದಲ್ಲಿ ಮೋಟಾರು, ವಿಮಾನ, ರಾಕೆಟ್ಸುಗಳನ್ನು ಕೂಡ ಮಾಡುತ್ತಿರುವರಂತೆ.

* * *

ದಂಪತಿಗಳು ಸಭೆಗೆ ಬಂದಿದ್ದರು, (ಪತ್ರಿಕೆಯ ಬಾತ್ಮಿ)
—ಈಗಿನ ಕಾಲದಲ್ಲಿ ದಂ ಎಲ್ಲಿದೆ ಪತಿಗಳಿಗೆ—ಈಗ ದಂಪತ್ನಿಗಳು ಸಭೆಗೆ ಬಂದಿದ್ದರು ಎಂದಿರಬೇಕಲ್ಲವೇ ?

* * *

ಉರಿಗಾಳು

“ ಕೇವಣಾತಿ ಕಳೆದುಕೊಂಡವರ ಹೆಸರನ್ನು ಬಹಿರಂಗಪಡಿಸಿ ಬಯಲಿಗೆಳೆಯುವುದಿಲ್ಲ ಎಂಬ ಭರವಸೆಯನ್ನು ಕೊಟ್ಟರೆ, ತಾವು ಮುಂದಿನ ಚುನಾವಣೆಗೆ ಸ್ಪರ್ಧಿಗಳಾಗಿ ನಿಲ್ಲುವೆವು ” ಎಂದು ಹಲವರು ರಾಷ್ಟ್ರೀಯ ಪಕ್ಷಗಳಿಗೆ ಬರೆದಿರುವರಂತೆ.

* * *

ಸೊಸೈಟಿಯಲ್ಲಿದ್ದ ಹಳೇ ಬೇಳೆಯನ್ನು ಹೇಗೆ ಎಲ್ಲಿ ಬಿಸಾಕುವುದೆಂದು ಗೊತ್ತಾಗದ ಗುಮಾಸ್ತೆಯೊಬ್ಬರು ಸಂಜೆ ಅದನ್ನೊಳಗಿಟ್ಟು ಹೊರಗೆ “ ಸರ್ಕಾರಿ ಸಾಮಾನು ” ಎಂಬ ಬೋರ್ಡನ್ನು ಬರೆದಿಟ್ಟರಂತೆ. ಬೆಳಗಾಗುವುದರೊಳಗೆ ಅದನ್ನೆಲ್ಲ ಮಾಮೂಲಿನಂತೆ ಮಾಮೂಲುದಾರರು ದೋಚಿಕೊಂಡು ಹೋಗಿಬಿಟ್ಟಿದ್ದರಂತೆ.

* * *

ಕನ್ನಡನಾಡಿದ ಪ್ರಖ್ಯಾತ ಉಪನ್ಯಾಸಕರ ಭಾಷಣಗಳನ್ನು ರಿಕಾರ್ಡುಗಳಾಗಿ ತಯಾರಿಸಿ ಔಷಧಿ ಕಂಪೆನಿಯವರೊಬ್ಬರು ಮಾರಲು ಏರ್ಪಾಟು ಮಾಡುತ್ತಿರುವರಂತೆ........ನಿದ್ರೆ ಬರದೆ ಒದ್ದಾಡುವವರು ಅವುಗಳನ್ನು ಕೊಂಡುಕೊಳ್ಳುವರು ಎಂಬ ಭರವಸೆ ನಮಗಿದೆ.

* * *

ಕ್ವಿಸ್ಲಿಂಗ್‌ಗೆ ಇಂಡಿಯಾದಲ್ಲಿ ಒಂದು ಉನ್ನತಾಧಿಕಾರ ಕೊಡುವುದಾಗಿ ಯಾರೋ ಆಸೆ ತೋರಿಸಿದ್ದರಂತೆ ....ಆಮೇಲೆ, ಇಲ್ಲೇ ಇದಾರೆ ಅಂತ ಗೊತ್ತಾದ ಮೇಲೆ, ಸುಮ್ಮನಾಗಿರಬೇಕು.

* * *

“ ಸ್ಥಳದ ಪೋಲೀಸಿನವರು ಇನ್ನೂ ಕಳ್ಳತನ ನಿಲ್ಲಿಸಿಲ್ಲ ! ” (ಪತ್ರಿಕೆ ಶಿರೋನಾಮೆ) .... ಅದು ಪ್ರಾರಂಭವಾದದ್ದೇ ದೊಡ್ಡ ತಪ್ಪು.

* * *

ಬರ್ಮಾ ಯುದ್ಧ ಮುಗಿದು ಮನೆಗೆ ಬಂದ ಸಿಪಾಯಿ (ಅತ್ತೆ ಸೊಸೆ ಜಗಳ ನೋಡಿ). **ಅಯ್ಯೋ! ಇಂಥ ಹೊಡೆದಾಟ ನಾನೆಂದೂ ಕಂಡಿಲ್ಲ, ದೇವರೇ!**

* * *

"ಈ ಸಲದ ವಸ್ತುಪ್ರದರ್ಶನ ಬಹಳ ಚೆನ್ನಾಗಿರುತ್ತೆ ಎಂದು ನಾವು ಧೈರ್ಯ ವಾಗಿ ಹೇಳಬಹುದು" (ಉಪನ್ಯಾಸ)........ಅದು, ನೋಡುವುದಕ್ಕೆ ಬರುವ ಜನ ಗಳನ್ನು ಆಶ್ರಯಿಸಿದೆ. ಈಗಲೇ ಹೇಳುವುದಕ್ಕಾಗುವುದಿಲ್ಲ.

* * *

ಅಡ್ಮಿರಲ್ ಸರ್ ಬ್ರೂಸ್ ಫ್ರೇಸರ್ ರವರು ಭಾರತದ ಪರವಾಗಿ ಜಪಾನ್ ಶರಣಾಗತಿಗೆ ರುಜು ಹಾಕಿದರಂತೆ.... ...ನೀರಿನ ಮೇಲೆ ರುಜು ಹಾಕುವುದಕ್ಕೆ ಅಡ್ಮಿ ರಲ್ಲುಗಳೇ ವಾಸಿ.


* * *

"ಭದ್ರಾ ಸೇತುವೆ ಮುರಿದು ಬಿತ್ತು!" (ಪತ್ರಿಕೆ).... ...ಹಾ! ಇಂಜಿನಿಯರು ಗಳೆಲ್ಲ "ಭದ್ರಾ! ಭದ್ರಾ! ಭದ್ರಾ!" ಅಂತ ಹೇಳುತ್ತಿದ್ದರಲ್ಲಾ! ಮುರಿದು ಬಿತ್ತೆ?

* * *

ನಗರದ ಫುಟ್ ಪಾತುಗಳಲ್ಲಿ ಉಪಜೀವನ ಮಾಡುತ್ತಿರುವ ಡೊಂಬರು, ಪಕ್ಷಿ ಶಾಸ್ತ್ರದವರು, ಸಾಮುದ್ರಿಕದವರು, ಚಿತ್ರ ವ್ಯಾಪಾರಿಗಳು, ಭಿಕ್ಷುಕರು ಮುಂತಾದ ವರು ತಮ್ಮ ಆದಾಯದ ಒಂದು ಭಾಗವನ್ನು ನಗರ ಸಭೆಗೆ ಕೊಡಲು ಯೋಚಿಸು ತ್ತಿರುವರಂತೆ!........ಬಲವಂತ ಪಡಿಸಿ ಜನಗಳನ್ನು ಫುಟ್ ಪಾತುಗಳಲ್ಲೇ ನಡೆಸು ವುದಾದರೆ!

* * *



ಮ್ಯೂಸಿಯಂ ದೃಶ್ಯ-ಕ್ರಿ.ಶ. 1970?

" ಅಟಾಮಿಕ್ ಬಾಂಬು ಅನಂತರ "

ನರಸಮ್ಮನ ನಗು

ನಗುವುದೆಂದರೆ
ನಮಗೆ ಬಲು ಸುಲಭ! ಬಲು ಬೇಗ ನಗೆಗಾಳಿಗಳೆ ಎದ್ದು
ಅಲೆ ಬಿದ್ದು, ಮುಗಿಯುವುದು!........
ನರಸಮ್ಮನಿಗೆ ಮಾತ್ರ, ನಗುವುದೆಂದರೆ, ಪಾಪ,
ಬಲು ಸುಸ್ತು!
ಮೊದ ಮೊದಲು, ಕೆರೆ ನೀರ ಮೇಲ್ಮೈಗೆ
ಮೆಲುಗಾಳಿ ಕಿರುಗಾಳಿ ಬೆರಳನಾಡಿಸುತ್ತಲಿ
ಕಚಕುಳಿಯನಿಟ್ಟವೋಲ್, ಒಳಗೊಳಗೆ ಸಂತಸಂ!
ಯಾವ ಮಾತಿಗೊ ಏನೊ, ಯಾರ ಮಾತಿಗೊ ಏನೊ,
ನಗೆ ಬೀಜ ಚಿಗುರೆದ್ದು, ಮನಮಣ್ಣನೊಡೆದೆದ್ದು
ಅರೆ ಬಿರಿದು ಅರೆ ನಾಚಿ, ಅಧರದಲಿ ತೋರುವುದು!—
ಬಿರಿಯುತ್ತ ಬಿರಿಯುತ್ತ,
ಎದ್ದ ನಗೆಯನು, ಮತ್ತೆ ಹಿಡಿದು ನಿಲಿಸಲು, ಪಾಪ,
ಸಾಧ್ಯವಿಲ್ಲದೆ, ಆಕೆ, ನಗುನಗುತ, ನಾಚುತ್ತ,
ಮತ್ತದರ ತೆಕ್ಕೆಯೊಳ್—
ಮತ್ತದರ ಮತ್ತಿನೊಳ್—
ಬಿದ್ದೆದ್ದು, ಒದ್ದಾಡಿ, ನುಚ್ಚು ನೂರಾಗುತ್ತ
ದಪ್ಪ ತನುವೊಳಗಿಂದ ಬುದ್ಬುದಗಳೆದ್ದಂತೆ
ಗುಳಗುಳನೆ ನಗೆಗುಳ್ಳೆ, ಫಳಫಳನೆ ಬಾಯ್ಗೆ ಬರೆ,
ಗುಂಡುಕಣ್ಣುಗಳೆರಡು ಬರಿ ಎರಡು ಗೆರೆಯಾಗೆ,
ಮುಖವೆಲ್ಲ ಸಾಲಾಗಿ ಡೊಂಕಾಗಿ ಗೆರೆ ಗೊಂಚಲೆದ್ದು ಬರೆ,—
ಬಿರುಗಾಳಿ ರಭಸಕ್ಕೆ ಮೈಕೊಟ್ಟ ಭಾರಿ ಮರ
ಅತ್ತಿತ್ತ ಬೀಸಾಡಿ ತತ್ತರಿಸುವಂದದಲಿ—
ಇಡಿ ಹೆಂಗ್ಸೆ ಅಲ್ಲಾಡೆ, ಡೋಲಾಯಮಾನದಲಿ,........

' ಇನ್ನೇನು, ಮುಗಿಯಿತೀ, ಮುತ್ತೈದೆ ನಗೆ ಯಾಟ '
ಎಂದು ನಾವ್ ಬಗೆಯುವಾ ಮುಂಚೆಯೇ, ಮತ್ತೊಮ್ಮೆ
ಮತ್ತೊಮ್ಮೆ, ಮಗುದೊಮ್ಮೆ, ನಗೆ ಎದ್ದು,—
ಬೀಹಾರ ಭೂಕಂಪ ಬೆಟ್ಟದಾ ಜುಟ್ಟನ್ನೆ ಹಿಡಿದದನು
ಕೆಡಹುತ್ತ ಕೆಳಿಕೆಸೆದ ತೆರದಲ್ಲಿ—ಮನದ ಕನ್ನಡಿ ಮುಂದೆ,
ಮತ್ತೆ, ಹಾಸ್ಯದ ನೆನಪು ನಲಿದಾಡೆ—ಮತ್ತೊಮ್ಮೆ
ನರಸಮ್ಮ! ನಗು ನಗುತ ಅಟ್ಟಹಾಸವ ಮಾಡಿ,
ಕೆಟ್ಟ ಹಾಸಕೆ ಇಳಿದು
ಪಕ್ಕೆಗಳ ಹಿಡಿದದುಮಿ,
ಸುಸ್ತಾಗಿ,
ಬಿಸುಸುಯ್ದು,
ಬಾಯ್ಬಿಟ್ಟು,
ಕಂಗೆಟ್ಟು,
ಕೈಗಳೆರಡನ್ನು ಎತ್ತಿ ಚೀರುತ್ತ, ಕುಸಿಯುತ್ತ,
ಅಯ್ಯೊ, ಅಯ್ಯೊ, ಒರಲಿ—
ಮುಖವೆಲ್ಲ ಕಡು ಕೆಂಪು—
ಕಣ್ತುಂಬ ಕಣ್ಣೀರು ;
ನೀರಡಿಕೆ ;
ಬೆವರಿಳಿದು, ಕುಂಕುಮವು ಕರಗಿ ಕೆನ್ನೀರಾಗೆ,
ಅಯ್ಯೊ, ಎನ್ನುತ, ಪಾಪ,
ಎದೆ ಮೇಲೆ ತಲೆ ಇರಿಸಿ,
ಸೋಘದಲಿ ನುಲಗುತ್ತ,
ಸೋತ ಬಲಗೈಯಿಂದ ಸೆರಗನ್ನು ಹಿಡಿದೆಳೆದು,
ಗಾಳಿ ಬೀಸುತ್ತ, ಮೆಲ್ಗೆ,........
ನಗು ನಿಲಿಸಿ, ಕೂರುವಳು.

ಸಿಟ್ವೆಲ್ ಕೃತ ಆಂಗ್ಲ ಕವನ ಭಾವ ವಿಸ್ತರಣ.

ಮಂಗಮ್ಮ ಮೇಡಂ

ಮೊನ್ನೆ ನಮ್ಮೂರು ಮಿಡ್ಲ್ ಸ್ಕೂಲ್ ಹೆಡ್ಮೇಡಂ ಶೀಲಮ್ಮನವರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು ನಮ್ಮನ್ನೆಲ್ಲ ಬಿಟ್ಟು ಹೊರಟೇ ಹೊದರು. ಅದೃಷ್ಟ ಅಂದರೆ, ಅದು.

ಪಾಪ! ಯಾವ ಯಾವುದೋ ಗಂಡು ಬಂದು ನೋಡಿದರೂನೂ, ಅವರ ಬಾಯಲ್ಲೇ ಆಗೋದಿಲ್ಲ ಅಂತ ಅನ್ನಿಸಿ, ತಾನು ಮದುವೆಗೆ ಸಿಕ್ಕಿಕೊಳ್ಳದೆ, ಕಣ್ಣಿಗೆ ಕನ್ನಡಕ ಕಟ್ಟಿಕೊಂಡು ಓದಿ ಗೀದಿ, ತಾನು ಬಿ.ಎ. ಗೆ ಅಂತ ಹೋದ ವರ್ಷ ಒಬ್ಬರೇ ಒಬ್ಬರು ಆ ವಿಷಯಕ್ಕೆ ಕೂತರೂನೂ, ಫಸ್ಟ್ ಆಗಿ ಪಾಸು ಮಾಡಿದರಂತೆ, ಜಾಣೆ.

ಆ ಮೇಲೆ, ಇದ್ದೇ ಇದೆಯಲ್ಲ! ಹೆಂಗಸರಿಗೂ ತಪ್ಪಿದ್ದಲ್ಲವಲ್ಲಾ! ಮೀಟಿಂಗು ಗಳಲ್ಲಿ ಮಾತ್ರ 'ಮಹಿಳೆಯರೇ, ಮಹನೀಯರೇ' ಅಂತ ನಮ್ಮನ್ನೇ ಮೊದಲು ಕೂಗುತ್ತಾರೆ. ಆದರೂ, ನಮಗೂ ತಪ್ಪಿದ್ದಲ್ಲವಲ್ಲಾ ಈ ಚಾಕರಿಗೆ ಅಲೆದಾಟ ಕೊಡೋ ಮೂವತ್ತು ರೂಪಾಯಿಗೆ ಮುನ್ನೂರು ಊರು ತಿರುಗಬೇಕಂತೆ ನಾವೂನು. ಯಾವುದಾದರೂ ಒಂದು ಜಾಗ ತೋರಿಸಿ ಬಿಡಬಾರದೆ ಶೀಲಮ್ಮನಿಗೆ? ಊಹುಂ.

ಹೆಣ್ಣು ಹೆಂಗಸು! ಹೇಗೆ ಹೋದಾಳು? ತೋರಿಸಿದ ಕಡೆಗೆ! ಹೊಸ ಸ್ಥಳ. ಗುಮಾಸ್ತೆಯರು ಬೇರೆ ಗಂಡಸರು. ಒಲ್ಲೆ, ಒಲ್ಲೆ, ಅಂತ—ಕಡೆಗೆ, ಇಲ್ಲೇ, ಪ್ರೈವೆಟ್ ಸ್ಕೂಲು, ಪ್ರೈವೆಟ್ಟಾಗಿರುತ್ತೆ, ಪ್ರೈವೆಟ್ ಟ್ಯೂಷನ್‌ಗಳು ಸಿಗಬಹುದು, ಅಂತ, ಬಂದರು, ನಮ್ಮೂರಿಗೆ.

ಬರುತ್ತಲೂ ಪ್ರಾರಂಭವಾಯಿತು ನೋಡಿ, ನಾಯಿ ಚಿಕ್ಕಿನ ಸಮಾಚಾರ! ಆಕೆಗೂ ಮೇಡಂ ಮಂಗಮ್ಮನಿಗೂ. ಹಣಾಹಣಿ. ಬೀದಿ ಜಗಳ ಎಷ್ಟೋವಾಸಿ. ಅಯ್ಯೋ, ಅಯ್ಯೋ! ಮಾತೆತ್ತಿದರೆ, ಹೋಗೆ, ಬಾರೆ! ಜವಾನಿಯಿಂದ ಹಿಡಿದು ಐ. ಜಿ. ವರೆಗೂ ಚಾಡಿ. ಎಲ್ಲ ಮಂಗಮ್ಮನದೇ ಕೈವಾಡ. ಅವಳದೇ ದುರ್ಬುದ್ಧಿ.

ಮಾತಾಡದೆ ಕೂತಿದ್ದರು, ಪಾಪ, ಶೀಲಮ್ಮ. ನಾನೂ ಅಲ್ಲೇ ಹಾಡಿನ ಮೇಡಮ್ಮಾಗಿದ್ದೆ. ನಮಗೆಲ್ಲ ಅಯ್ಯೋ ಅನ್ನಿಸುವುದು, ಮಂಗಮ್ಮ ಮೂಗರ್ಜಿ ಬರಸೋವಾಗ! ಅವಳ ನಾಲಿಗೆ ಸೀದುಹೋಗಬಾರದೆ, ಅನ್ನಿಸೋದು! ಶೀಲಮ್ಮ ಪಾಪ, ಎಷ್ಟಾದರೂ ಗಂಭೀರ. ಪಾಠಾನೂ ಚೆನ್ನಾಗಿ ಮಾಡುವರಂತೆ, ಹುಡುಗಿ ಯರು ಹೇಳುವರು. ಐದೇ ಐದು ನಿಮಿಷ ಅಂತೆ, ಅವರು ಪಾಠ ಹೇಳೋದು.

ಆದರೂ, ಅಷ್ಟರಲ್ಲೇ ಹುಡುಗಿಯರು ಸಾಕು ಅನ್ನೋರಂತೆ. ತಿರುಗ ನೋಡಿದರೆ ಆಕೆ ಬಿ.ಟಿ. ಕೂಡ ಅಲ್ಲ.

ಮಂಗಮ್ಮನ ಪ್ರೂಗರ್ಜಿ ಎಲ್ಲ ಆಕೆ ಮೇಲೆ ಮಣ್ಣೆರಚೋದಕ್ಕೇನೆ. ಸೀಮೆ ಸುಣ್ಣಾನ ಮನೆ ಗೋಡೆಗೆ ಒರೆದುಕೊಂಡಳು. ಮ್ಯಾಪ್ನಗಳನ್ನೆಲ್ಲ ಚಾಪೆ ಹಾಸಿ ಕೊಂಡಳು. ಲೈಬ್ರರಿ ಪುಸ್ತಕಗಳನ್ನೆಲ್ಲ ತಲೆದಿಂಬಾಗಿಟ್ಟುಕೊಂಡಿದ್ದಾಳೆ. ಬೆಂಚು ಕುರ್ಚಿ ಎಲ್ಲ ಬಚ್ಚಲೊಲೆಯೊಳಗೆ ಹೋಗಿದೆ. ಸ್ಕೂಲು ತೋಟದಲ್ಲಿ ಆಕೆ ಹಸು ಮೇಯುತ್ತೆ.. ಸ್ಕೂಲು ಜವಾನಿ ಆಕೆ ಸೀರೆ ಒಗೆಯುತ್ತಾಳೆ ಥೂ! ಥೂ! ಥೂ! ಅಷ್ಟಿಷ್ಟಲ್ಲ, ಹಾಳು ಸುಳ್ಳು!

ಮಂಗಮ್ಮನ ಕಪಿ ಚೇಷ್ಟೆ ಇಲ್ಲದಿದ್ದರೆ, ಸಲೀಸಾಗಿ ನಡೆದು ಹೋಗೋದು ಸ್ಕೂಲ್ ಕೆಲಸ, ನಿಗಿ ನಿಗಿ ಅಂತ ನಲಿಯೋವು ನಾವೆಲ್ಲ.

ಶೀಲಮ್ಮ ಕೂಡ ಎಷ್ಟುದಿನ ಅಂತ ಬಾಯಿ ಹಿಡಿದು ಕೂತಾರು? ಮೆಲ್ಲಗೆ ಗುಸ ಗುಸ ಪಿಸ ಪಿಸ ಅಂತ ಆಕೆನೂ ಮಂಗಮ್ಮನ ಪೂರ್ವಚರಿತ್ರೇನ ನಮ್ಮ ಕಿವಿಗೆ ಊದಿದರು. ಅವಳು ಬಾಳಿದ್ದು, ಬದುಕಿದ್ದು, ಅವಳ ಹಾಸ್ಟಲು, ಅವಳಿಗೆ ಬಂದ ಕಾಗದಗಳು, ಮನಿಆರ್ಡರುಗಳು ಅಂತ ಹೀಗೆ, ನೂರೆಂಟು!

ನನಗೆ ಭಯವಾಗುವುದು! ಅಯ್ಯೋ! ದೇವರೇ! ವಿಪರೀತಕ್ಕೆ ಬಂತಲ್ಲ, ಮಾರಾ ಮಾರಿಗಿಳಿಯಿತಲ್ಲ—ಅಂತ ತಲೆ ಚಚ್ಚಿಕೊಂಡೆ.

ದೇವರು ಕಣ್ಣು ಬಿಟ್ಟ, ಕಡೆಗೂ. ಶೀಲಮ್ಮನ ಸಂಬಂಧದಲ್ಲಿ ಯಾರೋ ಒಬ್ಬರು ಪುಣ್ಯಾತಿಗಿತ್ತಿ ತೀರಿಕೊಂಡುಬಿಟ್ಟಳು.

ನಡುನೀರು, ಸೇರು ಚಟಾಕು ಅಂತ ಆರು ಮಕ್ಕಳು, ಗಂಜಿಕಾಯಿಸುವವರು ಯಾರು ಇಲ್ಲ, ಆಳು ಕಾಳು, ಸರ್ಕಾರಿ ಸಂಬಳ. ಇನ್ನೂ ರಿಟೈರಿಲ್ಲ

ಶೀಲಮ್ಮನವರನ್ನ ಕೇಳಿದರಂತೆ, ಆತ. ಆಕೆಗೂ 29. ಒಳ್ಳೇ ವರಸಾಮ್ಯ. 'ಶುಭಸ್ಯ ಶೀಘ್ರಂ' ಅಂತ ಪಶ್ಚಿಮವಾಹಿನಿಯಲ್ಲೇ ಆಯಿತು. ಇಬ್ಬರೂ ಹಸೆ ಮೇಲೆ ಕೂತು ಫೋಟೊ ಬೇರೆ ತೆಗಿಸಿಕೊಂಡರಂತೆ.

ನಮಗಿದೆಲ್ಲ ಗೊತ್ತೇ ಇಲ್ಲ. ನಿನ್ನೆ ಸಂಜೆ ಬೆಲ್ ಹೊಡೆಯುತ್ತಲೂ, ಜವಾನಿ ಚೀಟಿ ತಂದಳು. ಮೀಟಿಂಗಿದೆ, ಅಂತ. ಹೋಗಿ ಕೂತರೆ, ನಿಧಾನವಾಗಿ ಹೇಳಿ ದರು—'ತಾನು ಹೊರಡುವುದನ್ನ, ಮಂಗಮ್ಮ ತನ್ನ ಸ್ಥಾನಕ್ಕೆ ಬರುವುದನ್ನ.' ಆಗ ಶೀಲಮ್ಮನವರ ಯಜಮಾನರು, ಅಯ್ಯಂಗಾರರು, ಹೊರಗೆ ಕಾರಲ್ಲಿ ಕೂತು ಹಾರನ್ ಒತ್ತುತ್ತಾಲೆ ಇದ್ದರು.

ಸರಿ! ನನಗೇ ಆಗದಿದ್ದ ಮೇಲೆ ಜಾನಕಮ್ಮ ತಡಿಯುತ್ತಾಳೆಯೇ? ಕೋಡಿ ಹರಿಸಿದಳು. ಸುಬ್ಬಮ್ಮ ಕಾವೇರಿ ಪುಟ್ಟಲಕ್ಷ್ಮಿ ತಾಯಮ್ಮ ಎಲ್ಲರೂ ಶುರು! ಗೊಳೋ, ಅಂತ. ಮಂಗಮ್ಮನ ಮೂತಿ ಮಾತ್ರ ಕಿಡಿ ಕಾರುತ್ತಿತ್ತು.

ಅಳುತ್ತಾನೇ ಕುಂಕುಮ ಕೊಟ್ಟು ಕಳುಹಿಸಿದೆವು, ಶೀಲಮ್ಮನನ್ನ. ಹೊಸ ಸಂಸಾರಕ್ಕೆ ಅಂತ ಆಕೆ ಆತನ ಜೊತೆ ಕಾರಿನಲ್ಲಿ ಕೂತು ಹೊರಟೇ ಬಿಟ್ಟರು .... ಅದನ್ನೇ ನೋಡುತ್ತ, ವರಾಂಡಾದಲ್ಲಿ ನಿಂತಿದ್ದೆವು, ಎಲ್ಲರೂ.

ಓಡಿ ಬಂದಳಲ್ಲ, ಮಂಗಮ್ಮ, ಒಳಗಿನಿಂದ. ಬಂದವಳೇ "ಬನ್ರಿ, ಇಲ್ಲಿ! ಯಾಕೆ ಹಾಗೆ ಅತ್ತೀರಿ, ನಾಚಿಕೆ ಇಲ್ಲವೆ ನಿಮಗೆ, ಎಳೀ ಹುಡುಗೀರೆ ನೀವು? ಅಷ್ಟೊಂದು ಪ್ರಾಣ ಬಿಡುವವರಾದರೆ ಕೊಡಿ ರಾಜಿನಾಮೆ ನೀವೂನು, ಬಿಳಿ ಭಾವಿಗೆ ನೀವೆಲ್ಲ," ಅಂತ ಅಟ್ಟಹಾಸ ಪ್ರಾರಂಭಿಸಿ ಬಿಟ್ಟಳು. 'ನಡೀರಿ ಒಳಕ್ಕೆ, ನಿಮ್ಮ ಮೂತೀನ ದಾರೀಲಿ ಹೋಗೋರಿಗೆ ತೋರಿಸಬೇಡಿ, ಅವಲಕ್ಷಣ, ನಲ್ಲಿ ಹತ್ರ ಹೋಗಿ ಮುಖ ತೊಳೆದುಕೊಂಡು ಬನ್ನಿ" ಅಂತ ಗದರಿಸಿದಳು.

"ನಾಳೆಯಿಂದ ನೀವೆಲ್ಲ ಸ್ಕೂಲಿಗೆ 10-45ಕ್ಕೇನೆ ಬರಬೇಕು. ದಿನವೂ 15 ನಿಮಿಷ ನನ್ನ ಆಫೀಸ್ ರೂಂನಲ್ಲಿ ನಿಮ್ಮ ಹತ್ರ ಮಾತನಾಡೋದಿದೆ" ಅಂದಳು.

* * *

ಈ ಹೆಂಗಸು ಹೆಡ್ ಮೇಡಂ ಆದಳಲ್ಲಾ, ಅನ್ನೋದಕ್ಕೇ ನಾವು ಅತ್ತಿದ್ದು, ಅಂತ ಅವಳ ಹತ್ರ ಹೇಗೆ ಹೇಳೋದು ನಾವು?

ಶ್ರೀ ರುದ್ರಮ್ಮ.

—o—

ಆದಾಯ ತೆರಿಗೆ ಕೊಡಲು ಕನ್ನಡ ಕವಿಗಳನ್ನು ನಿರ್ಬಂಧಿಸಬಾರದೆಂದು ಕವಿ ಸಮ್ಮೇಳನದಲ್ಲಿ ಠರಾವು ಮಾಡಲಾಯಿತಂತೆ....ಅವರನ್ನು ಈಗ ಯಾರೂ ನಿರ್ಬಂಧಿ ಸುತ್ತಿಲ್ಲವಲ್ಲಾ!

* * *

"ಭಾರತೀಯ ಮೂಕ ಪ್ರಾಣಿ ಪರಿಪಾಲನಾ ಸಂಘ" ಎಂಬ ಒಂದು ಸಂಸ್ಥೆ ಯನ್ನು ಮೊನ್ನೆ ಲಂಡನ್ನಿನಲ್ಲಿ ಸ್ಥಾಪನೆ ಮಾಡಿದರು." ಲೇಬರ್ ಪಕ್ಷ ಪಾತಿಗಳೂ ಕೂಡ ನಮ್ಮನ್ನು ಲೆಕ್ಕಿಸುವುದಿಲ್ಲ ಎಂದು ಗೊಣಗುತ್ತಿದ್ದವರಿಗೆ ಇದು ಸರಿಯಾದ ಉತ್ತರ!

* * *

ಮಡಿಸಿ ಕಿಸೆಯೊಳಗೆ ತುಂಬಿಕೊಳ್ಳಬಹುದಾದ ಚಪ್ಪಲಿಗಳು ಇಷ್ಟರಲ್ಲೇ ಮಾರಾಟಕ್ಕೆ ಬರುತ್ತವಂತೆ....ಹಾಗಾದರೆ ಸಂಗೀತ ಕಛೇರಿಯೊಳಕ್ಕೂ ಕಿಸೆ ಕಳ್ಳರು ನುಗ್ಗುತ್ತಾರೆ.

* * *


ಒಡಿಯೋ ಕಾಗುತ್ತೆ! ನೋ ನಿಂಗೆ ಅವನ್ನ, ಹನುಮ


ಆಗ್ದೆ ಏನು ಬುದ್ಧಿ ಒಡ್ದಿದ್ರೆ ನನ್ನೆಸರು ಹನುಮ ಅಲ್ಲ, ಬುದ್ಧಿ---

ವೈದ್ಯನಿಗೇ ವ್ಯಾಧಿ

ನನ್ನ ಕಾದಂಬರಿಗಳನ್ನೋದಿದ ಮೇಲೂ ನನಗೆ ನಿದ್ರೆ ಬರುತ್ತಿರಲಿಲ್ಲವೆಂದರೆ ನನಗೂ ನಿದ್ರಾದೇವಿಗೂ ಎಷ್ಟು ದ್ವೇಷವಿದ್ದಿರಬಹುದೆಂದು ನೀವೇ ಊಹಿಸಬಹುದು. ಈ 'ನಿದ್ರೆಲೆಸ್‌ನೆಸ್' ಉ, ನಾನು ಕಾದಂಬರಿಗಳನ್ನು ಬರೆಯತೊಡಗುವುದಕ್ಕೆ ಮೊದಲು ಇರುತ್ತಿರಲಿಲ್ಲ. ಕಾರಣ, ಆಗ ನಾನು ಇತರರ ಕಾದಂಬರಿಗಳನ್ನು ಯಥೇಚ್ಛವಾಗಿ ಓದುತ್ತಿದ್ದೆ. ಈಗಾದರೋ ನಾನೇ ಒಬ್ಬ ಕಾದಂಬರಿಕಾರನಾಗಿಬಿಟ್ಟಿದ್ದೇನೆ ಆದ್ದರಿಂದ, ಇತರ ಕಾದಂಬರಿಕಾರರಂತೆ ನನಗೂ ಪುರಸೊತ್ತು, ಹಳ್ಳಿ ಸೊತ್ತು ಯಾವುದೂ ಇಲ್ಲವಾಗಿದೆ. ನನ್ನ ಕಾದಂಬರಿಗಳೆಲ್ಲಾ ಔಷಧಿ ಅಂಗಡಿಗಳಲ್ಲಿ 'ಸುಖ ನಿದ್ರಾದಾಯಿನಿ'ಗಳ ಜತೆಯಲ್ಲಿ ಇಡಲ್ಪಟ್ಟಿದ್ದರೂ ನನಗೆ ಮಾತ್ರ ಆ ಸುಖವಿಲ್ಲದಾಗಿತ್ತು. ಮಹಾಕವಿ ಪೋಪನ 'ನಾವು ನಿದ್ದೆಗೆಟ್ಟು, ನಮ್ಮ ಓದುಗರಿಗ ನಿದ್ರೆ ಕೊಡುತ್ತೇವೆ' ಎಂಬ ಮಾತು ಅಕ್ಷರಶಃ, ಒತ್ತೂ ಸಹ ನಿಜ. ಚಹಾ ಕವಿ ಅಕ್ರೂರನ 'ತನ್ನ ಹೋಟಲ ಕಾಫಿ ತನಗಲ್ಲವಯ್ಯಾ! ನನ್ನ ಕಥೆಕೊಟ್ಟ ನಿದ್ರೆ ನನಗವಲ್ಲಯ್ಯಾ!!' ಎಂಬ ವಚನದಲ್ಲಿ ಆತ್ಮಚರಿತ್ರೆಯ ಅಂಶವಿದೆಯೆಂದರೆ ತಪ್ಪಾಗಲಾರದು.

ಇಂತಹ ವಿಷಮಪರಿಸ್ಥಿತಿಯಲ್ಲಿ ನನಗೊಬ್ಬ ಗೆಳೆಯ ಸಿಕ್ಕಿದನು. ಎಂಥ ಗೆಳೆಯ! ಮನಮೋಹನ ಮೊಗದ ಮನುಷ್ಯ. ಪೂರ್ವಜರ ಆಧುನಿಕ ಅಚ್ಚು ಅವನು! ನಡೆನುಡಿಗಳಲ್ಲಿ ಪ್ರಾಚೀನ ನಾಗರಿಕತೆ ಮರುದನಿ ಕೊಡುತ್ತಿತ್ತು! .... ಹಾ ... ಮರೆತೆ ....ನಾನೀಗ ಕಾದಂಬರಿ ಬರೆಯುತ್ತಿರುವೆನೆಂದು ತಿಳಿದುಕೊಂಡು ಬಿಟ್ಟೆ....ಕ್ಷಮಿಸಿ.. ಅವನು ನನ್ನ ಹತ್ತಿರಹತ್ತಿರಕ್ಕೆ ಗೆಳೆತನದ ಸೆಳೆವಿನಿಂದೆಳೆಯಲ್ಪಟ್ಟಂತೆಲ್ಲಾ ನನ್ನ ಸಮೀಪದ ಸ್ನೇಹಿತನಾಗತೊಡಗಿದನು.

ಕಡೆಗೊಂದು ದಿನ ನನ್ನ ವಿಪರೀತ ವ್ಯಾಧಿ—'ನಿದ್ರೆಲೆಸ್‌ನೆಸ್'—ನ್ನು ಅವನಿಗೆ ತಿಳಿಸಿದೆನು. ಅವನ ಕಣ್ಣು ಅಗಲವಾಯಿತು (ನನ್ನ ಕವಿಹೃದಯಕ್ಕೆ ಅದು ಅಂದಿನ ಮಸಾಲೆ ದೋಸೆಯನ್ನು ನೆನಪುಮಾಡಿಕೊಟ್ಟಿತು). ಅವನು ತನ್ನ ಬಾಯನ್ನು ವಿಶಾಲವಾಗಿ ತೆರೆದನು (ಇದು ನನ್ನ ಪಬ್ಬಿಗನ ಕಣ್ಣಿಗೆ ಕಾಡುಕಿಕ್ಕಿರಿದ ಮಲೆಗಳ ಮಧ್ಯದ ಮಡುವಿನಂತೆ ಕಾಣಿಸಿತು) ಅವನು ತನ್ನ ದನಿಕಿನ್ನರಿಯನ್ನು ನನ್ನ ಮುಂದೆ ಬಾರಿಸತೊಡಗಿದನು ....“ಏನು ನಿಮಗೂ ವೈದ್ಯನ ವ್ಯಾಧಿಯೇ? ನಿಮಗೂ ನಿಮ್ಮ ಕಾದಂಬರಿಗಳಿಂದ ನಿದ್ರಾಭಂಗವೇ? ನನ್ನಂತೆ ನೀವೂ ಇತರರ ಕಾದಂಬರಿಗಳನ್ನು ಕೊಳ್ಳಲು ಕಾಸಿಲ್ಲದೆ, ಅದನ್ನೋದಲು ತಾಸಿಲ್ಲದೆ, ನಿಮ್ಮ ಕಾದಂಬರಿಗಳನ್ನೇ ಓದಬೇಕಾಗಿ ಬಂದು, 'ನಿದ್ರಾಲತಾಂಗಿಯು ಕೇಳಿಕೆಗೆಡೆ'ಯಿಲ್ಲದಂತಾಗಿದೆಯೇ? ನನಗೂ ನನ್ನ ಕಾದಂಬರಿಗಳಿಂದ ನಿದ್ರಾಭಂಗವಾಗುತ್ತಿದೆ. ಇದಕ್ಕೇನಾದರೂ ದಾರಿ ಹೇಳಿ” ಎಂದನವ. ನನಗೆ ಮಹದಾಶ್ಚರ್ಯವಾಯಿತು. ಏನು? ಈತನೂ ಕಾದಂಬರಿಕಾರನೇ? (ನನಗಲ್ಲಿಯವರೆಗೂ ತಿಳಿದೇ ಇರಲಿಲ್ಲ). ಈ 'ಡಾಕ್ಟರ'ಗೂ 'ಡಿಸ್‌ಪೆಪ್ಸಿಯ'? ... ಹಾ.... ಒಂದು ದಾರಿ.... ಒಂದುಪಾಯ?.... ... ಅಂಥ

ಯುದ್ಧವನ್ನು ಅಡಗಿಸಿದ ಅಣುಬಾಂಬಿನಂತೆ, ರಾಜಕೀಯದಲ್ಲಿ ರಂಪವೆಬ್ಬಿಸುವ ರಾಜ ತಂತ್ರಜ್ಞನಂತೆ, ಬಿಳಿನೋಡಗಳ ಬಳಿಕ ಬರುವ ಕರಿ ಮಿಂಚಿನಂತೆ(!) ನನ್ನ ತಲೆಯಲ್ಲಿ ಅಪರೂಪದ ಬುದ್ಧಿಶಕ್ತಿಯಿಂದ ಉದ್ಭವವಾದ ಅಪೂರ್ವ ಯುಕ್ತಿ(!) ಈ ನನ್ನ 'ಐಬಿ' ಲ್ಲದ 'ಐಡಿಯ'ವು, ಐಜಗಗಳನ್ನು ಐಕ್ಯಮಾಡಿಕೊಳ್ಳಬಲ್ಲ ಐಂದ್ರಜಾಲಿಕನಂತಿದೆ.... ಹೇ ನಿದ್ರಾಂಗನೆ, ನೀನಿನ್ನು ನನ್ನವಳಾದೆ! ಓ ನಿದ್ರಾಭಂಗನೆ, ನಿಲ್ಲದೆ ನೀಡು ನಿನ್ನ ನಿಡಿದಾದ ನಿಲ್ಗೋಲುಗಳ !........(ಮರೆತೆ, ಪುನಃ ನನ್ನ ಕವಿಹೃದಯವು ನನ್ನ ಕೈ ಯನ್ನು ಆಳತೊಡಗಿಬಿಟ್ಟಿತು....ಕ್ಷಮಿಸಿ ...). ನನ್ನ ಸಲಹೆಯನ್ನವನಿಗೆ ಅರುಹಿದೆ. ಅವನೂ ಒಪ್ಪಿಗೆ ಇತ್ತನು. ನನ್ನೊಬ್ಬನಲ್ಲದೆ ಮತ್ತಾರೂ ಓದದ ನನ್ನ ಕಾದಂಬರಿ ಗಳು ಅವನ ಕೈ ಸೇರಿದುವು. 'ಡಿಟ್ಟೋ' ಆದ ಅವನ ಕಾದಂಬರಿಗಳು ನನ್ನ ಕರ ಕಮಲಗಳನ್ನೂ ಮೇಜುಮಲ್ಲಿಗೆಗಳನ್ನೂ ಅಲಂಕರಿಸಿದುವು.

ಅಂದು ರಾತ್ರಿ. ನಡುನಿಶಿಯ ಕಡುಕತ್ತಲೆಯ ಬಿಳಿ ಬೆಳಕು. ನಾನು ಆಗ ತಾನೆ ನನ್ನ ಗೆಳೆಯನ "ತ್ರಿಪುರಸುಂದರಿ ಅಥವಾ ಕರ್ಮವರ್ಮನ ಮರ್ಮ" ಎಂಬ ಕಾದಂಬರಿಯನ್ನು ಕೈಗೆತ್ತಿಕೊಂಡು ಓದತೊಡಗಿದೆ. ಸ್ವಲ್ಪ ಹೊತ್ತಿನಲ್ಲೇ,— ಆಶ್ಚರ್ಯ! ಮಹದಾಶ್ಚರ್ಯ 100! ಗಳು—ನಿದ್ರಾದೇವಿಯ ಮೆತ್ತನೆಯ ಮಡಿಲಲ್ಲಿ ಮಲಗಿ ಮುಂಡಿನೋವಿನ 'ಮನೋಹರತೆ'ಯನ್ನು ಮರೆತಿದ್ದೆ: ನನ್ನನ್ನಾಗ ಸುಖ ನಿದ್ರೆಯೆಂಬ ಸುಂದರ ಸಭಾರೋಗವು ಸಂತುಷ್ಟನನ್ನಾಗಿಸಿತ್ತು. ಎಷ್ಟೋ ದಿನಗಳಾದ ಮೇಲೆ ನಿದ್ರೆಯು ನನ್ನ ಒಡಲನ್ನಪ್ಪಿತು.

ಮರು ದಿನ ಬೆಳಗ್ಗೆ 10 ಗಂಟೆಗೆ ನಾನೆದ್ದೆ. ಇಲ್ಲ, ನಾನೇ ಏಳಲಿಲ್ಲ; ಪಕ್ಕದ ಮನೆಯವರು, ಹೊರಬಾಗಿಲು ಇನ್ನೂ ತೆಗೆದಿಲ್ಲದುದನ್ನು ಕಂಡು ಕುತೂಹಲದಿಂದ ಬಾಗಿಲು ತಟ್ಟಿ ನನ್ನನ್ನೆಬ್ಬಿಸಿದರು (ನನ್ನನ್ನು ನೋಡಿದಾಗ ಅವರ ಕಣ್ಣಿನಲ್ಲಿ ನಿರಾ ಶೆಯ ನೆರಳು ತೋರಿ ಮರೆಯಿತು. ಯಾಕೋ ಏನೋ? ಯಾರಿಗೆ ಗೊತ್ತು?) ಮುಖ ಕೈಕಾಲುಗಳನ್ನು ನೀರಿನಲ್ಲಿಯೂ, ಬಾಯಿಗಂಟಲು ಹೊಟ್ಟೆಗಳನ್ನು ಕಾಫಿ ನೀರಿನಲ್ಲಿಯೂ ತೊಳೆದುಕೊಂಡು, ನನ್ನ ಅಚ್ಚು ಮೆಚ್ಚಿನ ಆಪದ್ಬಾಂಧವ ಗೆಳೆಯ ನನ್ನು ನೋಡಿಕೊಂಡು ಬರೋಣವೆಂದು ಹೊರಟೆ. ಅವನ ಮನೆಯ ಬಾಗಿಲಿಗೆ ಹೋಗುತ್ತಲೂ, ಅವನ ಸಹಧರ್ಮಿಣಿಯೋ ಏನೋ, "ಇದೇನು ಬಂದಿದೆ, ಯಾವತ್ತೂ ಇಲ್ಲದ ನಿದ್ರಾರೋಗ ಇವತ್ತು, ಇವರಿಗೆ? ಕಾಫಿ ಕಾಯಿಸಿದ್ದಾರೇನೋ ಅಂತ ನೋಡಿದರೆ ಇನ್ನೂ ಎದ್ದೇ ಇಲ್ಲ ಮಹರಾಯರು!...." ಎನ್ನುತ್ತಿದ್ದದ್ದು ಕೇಳಿ ಸಿತು, ನಾನು ಹೊರಟುಬಂದೆ. ನನ್ನ ಕಾದಂಬರಿಗಳ ಮಹತ್ವದಲ್ಲಿ ನನಗೆ ನಂಬಿಕೆ ಹೋಗಿದ್ದದ್ದು ಹಿಂತಿರುಗಿ 'ಡಬಲ್' ವೇಗದಲ್ಲಿ ಓಡಿಬಂದು ನನ್ನನ್ನು ಸೇರಿತು.

ಇನ್ನೊಂದು ವಿಷಯ. ವಾಚಕರಲ್ಲನೇಕರು, ಲೇಖಕರು ತಂತಮ್ಮ ಪುಸ್ತಕ ಗಳ 'ಕಾಂಪ್ಲಿಮೆಂಟರಿ' ಕಾಪಿಗಳನ್ನು ಅದಲುಬದಲು ಮಾಡಿಕೊಳ್ಳುವುದು ವಿಮರ್ಶ ನಾತ್ಮಕ ದೃಷ್ಟಿಯಿಂದ ಎಂದು ತಿಳಿದುಕೊಂಡಿರಬಹುದು.

ಇನ್ನು ಮುಂದೆ,.,...... ?

'ಅಕ್ರೂರ.'

ಹಳೇ ಹೊಳೆ

ಅದೊಂದು ಬಹಳ ಹಳೆಯ ಹೊಳೆ. ಮಳೆಗಾಲದಲ್ಲಿ ಸ್ವಲ್ಪ ಏರು, ಬೇಸಿಗೆಯಲ್ಲಿ ಸ್ವಲ್ಪ ತಗ್ಗು ಆದರೂ ಸದಾಕಾಲವೂ ಅದರ ತುಂಬ ಸಮೃದ್ಧಿಯಾಗಿ ನೀರು.

ಏಕೋ ಏನೋ ಒಂದು ಸಲ ದಡಕ್ಕೆ ಆ ಹೊಳೆಯ ಮೇಲೆ ಅಸಮಾಧಾನ ಬಂತು. ಹೊಳೆಯ ಗತಿಗೆ ಅನನುಕೂಲವಾಗಲೆಂದು ಕುಸಿದು ಅಡ್ಡ ಬಿತ್ತು. ಎರಡು ಕ್ಷಣ ಹೊಳೆ ಹರಿಯುವುದಕ್ಕೆ ಸ್ವಲ್ಪ ಅಡ್ಡಿಯಾಯಿತು. ಎರಡು ಕ್ಷಣ ಅದ ಮೇಲೆ ಬಿದ್ದ ದಡದ ಮಣ್ಣು ಕರಗಿ ಹೋದ ಮೇಲೆ, ಹೊಳೆ ಮೊದಲಿನ ಹಾಗೇ ಹರಿಯಿತು.

ಮಣ್ಣಿನೊಡನೆ ಸಂಬಂಧವಿಟ್ಟುಕೊಂಡಿದ್ದ ಕೆಲವು ಸಣ್ಣ ದೊಡ್ಡ ಕಲ್ಲುಗಳು ಕೂಡ ಹೊಳೆಗೆ ಬುದ್ಧಿ ಕಲಿಸಬೇಕೆಂದು, ಅದರ ದಾರಿಯನ್ನು ತಮಗೆ ತೋಚಿದಂತೆ ತಿದ್ದಬೇಕೆಂದು ಹತ್ತಿರ ಬಂದವು. ಬಂದದ್ದೇ ತಡ, ಅದುವರೆಗೆ ಬಿಸಿಲು ಗಾಳಿಗಳನ್ನು ಕಂಡು, ತಮ್ಮ ಪಾಡಿಗೆ ತಾವು ಬದುಕುತ್ತಿದ್ದ ಆ ಕಲ್ಲುಗಳು ಹೊಳೆಯೊಳಗೆ ಮುಳುಗಿದುವು. ನೀರಿನ ಸೆಳೆತಕ್ಕೆ ಸಿಕ್ಕಿ ಹತ್ತು ಹೆಜ್ಜೆ ಮುಂದೆ ಹೋದವು. ಇನ್ನೂ ಮುಂದೆ ಹೋಗುವುದಕ್ಕಾಗಲಿ, ಮೇಲೆ ಎದ್ದು ಬರುವುದಕ್ಕಾಗಲಿ ಸ್ವಂತ ಶಕ್ತಿಯಿಲ್ಲದೆ ಅಲ್ಲೇ ಬಿದ್ದುವು. ಮೈಮೇಲೆಲ್ಲ ಪಾಚಿ ಬೆಳೆದುಕೊಂಡಿತು. ಹತ್ತಿರ ಕಿವಿಗೊಟ್ಟು ಕೇಳಿದರೆ "ನಾಮಾಪಿ ನಶ್ರೂಯತೇ" "ನಾಮಾಪಿ ನಶ್ರೂಯತೇ" ಎಂದು ಅವುಗಳ ಗೋಳುಪದ ಅಶಕ್ತವಾಗಿ ಕೇಳಿಸುತ್ತಿತ್ತು.

ಆ ಸಣ್ಣ ಪುಟ್ಟ ಮಣ್ಣು ಕಲ್ಲುಗಳ ಪರಾಕ್ರಮದಿಂದ ಅದೇನು ಸ್ಫೂರ್ತಿ ಬಂತೋ, ದಡದಲ್ಲಿ ಅದುವರೆಗೆ ಸ್ಥಿರವಾಗಿದ್ದ ಒಂದು ಕಲ್ಲುಬಂಡೆ ತಾನೂ ಹೊಳೆಯ ಮೇಲೆ ದಾಳಿ ಬಂತು. ಹೊಳೆ ಅದರ ದಾಳಿಯನ್ನು ಪ್ರತಿಭಟಿಸಲಿಲ್ಲ. ಬಂಡೆಯನ್ನು ತಾಕಿದಾಗ ಎರಡು ಭಾಗವಾಗಿ, ಬಂಡೆಯನ್ನು ಎರಡೂ ಕಡೆಯಿಂದ ತಬ್ಬಿಕೊಂಡು, ಬಂಡೆಯನ್ನು ಬಿಟ್ಟಾಗ ಪುನಃ ಮೊದಲಿನಂತೆಯೇ ಒಂದಾಗಿ ಮುಂದೆ ಹೋಯಿತು.

ತಾನು ಬೀಜವಾಗಿದ್ದ ಕಾಲದಿಂದಲೂ ಬಂಡೆಯ ಪಕ್ಕದಲ್ಲೇ ಇದ್ದು, ಮೊಳೆತು, ಬೆಳೆದು, ಬಲಿತು, ಮುದಿಯಾಗಿದ್ದ ಒಂದು ಮಹಾವೃಕ್ಷ ಬಂಡೆಯನ್ನು ಅಗಲಿರಲಾರದೆ, ಅದರ ಮಹಾಕಾರ್ಯದಲ್ಲಿ ತಾನೂ ಸಹಗಮನ ಮಾಡಿಕೊಳ್ಳಬೇಕೆಂದು ನಿಂತಲ್ಲಿಂದಲೇ ದುಃಖದಿಂದ ಕುಗ್ಗಿಹೋಗಿ, ಧಡೀರನೆ ಹೊಳೆಗೆ ಅಡ್ಡವಾಗಿ ಬಿತ್ತು. ಹೊಳೆ ಒಂದು ಕ್ಷಣ ಬೆಚ್ಚಿತು. ಮರು ಕ್ಷಣದಲ್ಲಿಯೇ ತನ್ನ ಸ್ಥೈರ್ಯವನ್ನು

ಸವರಿಸಿಕೊಂಡು, ಬಿದ್ದ ಮರದ ಅಡಿಯಲ್ಲಿ ಅರ್ಧ ತೂರಿ, ಮರದ ಮೇಲೆ ಅರ್ಧ ಹಾರಿ ಮುಂದೆ ಸ್ವಲ್ಪ ದೂರ ಜಾರಿ ಮೊದಲಿನಂತೆಯೇ ಹರಿಯಿತು.

ಅನೇಕ ಕಾಲ ಕಳೆಯಿತು. ದಡ ಎಷ್ಟೋಸಲ ಕುಸಿಯಿತು. ಕಲ್ಲು ಮಣ್ಣು ಎಷ್ಟೋ ಬಿತ್ತು. ಬಂಡೆಗಳೂ ಮರಗಳೂ ಎಷ್ಟೋ ಉರುಳಿ ಬಂದವು. ಎರಡು ಕ್ಷಣ ಗತಿಭಂಗವಾದರೂ ಹೊಳೆ ಬಹುಬೇಗನೆ ಚೈತನ್ಯಗೊಳ್ಳುತ್ತಿತ್ತು.

ವಿಶ್ವಶಿಲ್ಪಿಯೊಬ್ಬ ಬಂದ. ಊರ ಬಳಿಯ ಹೊಳೆಯನ್ನು ನೋಡಿದ. ಇತರ ಊರುಗಳ ಬಳಿ ಹೊಳೆಗಳಿಲ್ಲದೆ, ಬೆಳೆಗಳಿಲ್ಲದೆ, ದನ ಕರು ಜನ ಮರ ಒಣಗುವುದನ್ನೂ ಆತ ಕಂಡಿದ್ದ. ಒಂದು ಜಲದಿಂದ ಹತ್ತು ನೆಲ ಬೆಳೆಸಬೇಕೆಂದು ಇಚ್ಛಿಸಿದ. ಹೊಳೆಯಲ್ಲಿ ನೀರಿನ ರಭಸ ಕಡಮೆಯಾಗಿದ್ದ ಕಾಲ ನೋಡಿಕೊಂಡು, ಹೊಳೆಯಲ್ಲಿ ಪ್ರವಾಹ ಬಂದಾಗ ಅದರ ನಡತೆ ನೋಡಿಕೊಂಡು, ಹೊಳೆಯ ಗುಣಗಳಿಗೆ ಹೊಂದಿಕೊಂಡು ಅದರ ಸ್ವಭಾವವನ್ನು ಅನುಸರಿಸಿ, ಇಷ್ಟಿಷ್ಟೂ ಆತುರವಿಲ್ಲದೆ, ನಿದಾನವಾಗಿ ಹೊಳೆಗೇ ಗೊತ್ತಾಗದ ಹಾಗೆ ಅದರ ದಾರಿಯಲ್ಲಿ ಒಂದು ದೃಢವಾದ ಕಟ್ಟೆ ಹಾಕಿದ.

ಹೊಳೆ ತನ್ನ ಮುಂದೆ ಮಾತ್ರ ನೋಡುತ್ತ 'ಬೇಸಗೆಯಲ್ಲಿ ಇದ್ದ ಹಾಗೇ ಇದ್ದೇನೆ' ಎಂದುಕೊಂಡಿತು. ಏಕೆ ಹಾಗಿದ್ದೇನೆ ಎಂಬುದನ್ನು ಕುರಿತು ಯೋಚಿಸಬೇಕೆಂಬುದು ಕೂಡ ಅದಕ್ಕೆ ಹೊಳೆಯಲಿಲ್ಲ.

ವಿಶ್ವಶಿಲ್ಪಿ ತನ್ನ ಕೃತಿಯನ್ನು ಮುಗಿಸಿದಾಗ ಲೋಕ ಅದನ್ನು ಕಂಡು ಮೆಚ್ಚಿ ಮುಗಿಲನ್ನು ಮುರಿದುಬಿಡುವಂತೆ ಕೂಗಿದ ಮಹಾ ಜಯಘೋಷವನ್ನು ಕೇಳಿ, ಒಂದು ದಿನ ಹೊಳೆ ಕೌತುಕದಿಂದ ಹಿಂದಿರುಗಿ ನೋಡಿತು. ನೋಡಿ ಆಶ್ಚರ್ಯದಿಂದ ಮೂಕವಾಯಿತು. ಕಟ್ಟೆಯ ಮುಂದುಗಡೆ ಬೇಸಗೆಯ ತೊರೆಯಂತೆ ಕಾಣುತ್ತಿದ್ದ ತಾನು ಕಟ್ಟೆಯ ಹಿಂದುಗಡೆ ಸಾಗರವಾಗಿ ಬೆಳೆದು ನಿಂತಿದ್ದುದನ್ನು ಕಂಡು, ತನ್ನ ವಿಶಾಲತೆಗೆ ಕಾರಣನಾದ ಆ ವಿಶ್ವಶಿಲ್ಪಿಗೆ ಮೌನದಿಂದ ಗಂಭೀರವಾಗಿ ವಂದನೆ ಸಲ್ಲಿಸಿತು.



" ಇಲ್ನೋಡು, ನಾಕಾಣೆಗೆ ಒಂದು ಕಾಸ್ ಜಾಸ್ತಿ ಕೊಡೋಲ್ಲ.
ನಮ್ಹತ್ರ ಖರಾರು ಬೆಲೇಂದ್ರೆ, ಖರಾರು ಬೆಲೆ "

ಬೆಳಗಿನ ವಿನೋದ

(ಶಿಶುಗೀತೆ)

ಏಳಿರೇಳಿರಿ ! ಹುಡುಗರೆಲ್ಲರು, ಮಹಡಿ ಮೇಲಕೆ ತೆರಳುವಾ,
ಮಲಗಿ ಗೊರಕೆಯ ಹೊಡೆಯುವಣ್ಣನ ರೇಗಿಸೇಳಿಸಿ ಮರಳುವಾ !

೧

ಹಲಗ, ಟಿನ್, ಮೊರ, ತಟ್ಟೆ, ಜಾಗಟೆ, ಬಡಿದು—ಗದ್ದಲವೆಬ್ಬಿಸಿ
ಮೆಟ್ಲು ಮೆಟ್ಲಿಗು ಬೊಬ್ಬೆ ಬಾರಿಸಿ, ಕುಯ್ಯೊ ಮರ್ರೊ ಬೊಗಳುತ . ....
ಏಳಿರೇಳಿರಿ....

೨

ಕತ್ತೆ, ನಾಯ್ಮರಿ, ಕರಡಿ, ಕಪಿಯೆಂದೆಮ್ಮ ದೂರುವ ಧಡಿಯಗೆ
ಕಾಡು ಪ್ರಾಣಿಗಳೊಟ್ಟುಗೂಡುತ ಕಾಡಬಂದಿವೆ ಎನಿಸಲಿ !............
ಏಳಿರೇಳಿರಿ .. ....

೩

ಗಾಯಗೊಂಡಾ ಕೆಂಚುಕೋಣನು ಚೀರಿ ನೆಗೆಯುವ ತೆರದಲಿ
'ಸಾಯ ಬಡಿವೆನು,' ಎನುತ ಚಿಮ್ಮುತ ಅಣ್ಣ ಬರುವನು ಹೊರಗಡೆ ....
ಏಳಿರೇಳಿರಿ . ....

೪

ಕಣ್ಣನುರುಳಿಸಿ, ಕುಣಿಸಿ ಮೀಸೆಯ, ಅವನು ನಮ್ಮನು ಹೆದರಿಸೆ
ಕೆಳಕೆ ಧಾವಿಸಿ, ನುಸುಳಿ, ತಪ್ಪಿಸಿ ನೆಲಕೆ ಬೀಳಿಸಿ ನಲಿಯುವ ....
ಏಳಿರೇಳಿರಿ. ....

ಫಜೀತಿ

ಆ ಮೆಣಸಿನ ಪುಡಿ ಡಬ್ಬವೆಲ್ಲಿ? ಹುಣಿಸೇ ಹಣ್ಣಿನ ಕುಕ್ಕೆ ಎಲ್ಲಿಟ್ಟಿದೀಯೆ? ಥೂ, ಹಾಳು ಒಂದ್ನಿಕ್ಕಿದರೆ, ಇನ್ನೊಂದಿಲ್ಲ, ಸಂಸಾರಸ್ಥರ ಸಂಸಾರವೇನೇ ಇದು? ಆ ಉಪ್ಪಿಂದೆಲ್ಲಿ?

ಆಯ್ಯೋ ಏನ್ಹಾಗಾಡ್ತೀರೀಂದ್ರೆ! ಸುಮ್ನೆ ಎಲ್ಲಾದಕ್ಕೂ ರೇಗೋದು! ನೋಡಿ ಅಲ್ಲೇ ಆ ಬಡುವಿನ ಮೇಲೇ ಇದೆ—ಮೆಣಸಿನ ಪುಡೀದು. ಆ ಬೇಳೆ ಡಬ್ಬದ ಪಕ್ಕದಲ್ಲೇ ಇರಬೇಕು! ಎಲ್ಲಿಟ್ರೆ ಆ ಬೇಳೇದನ್ನ? ಈಗ ನೀವೇ ಬೇಳೆ ಬೇಯಹಾಕಿದ್ರಿ!

ಎಲ್ಲೋ ಅಕಸ್ಮಾತ್ ಬೇಳೇದು ಸಿಕ್ಕಿ ಬಿಡ್ತು. ಬೇಳೆ—ಬೇಯಹಾಕಿದ್ದಾಯ್ತು. ಮೆಣ್ಸಿನ ಪುಡೀದು ಎಲ್ಲಿದ್ಯೋ ಏನೋ! ಅದೋ ಹಾಳು ಒಂದೇ ತರಹದ ಡಬ್ಬ ಗಳು! ಬ್ಯಾಡ, ಒಂದೇ ತರಹದ್ದು—ಬೇರೆ ಬೇರೆ ತರಹದ್ದು ತರ್‍ತಿನೀ ಅಂದ್ರೆ— ಇಲ್ಲ—ಇಲ್ಲ—ಬ್ಯಾಡೀಂದ್ರೆ ಒಂದೇ ತರದ್ದು ಚೆನ್ನಾಂದ್ರೆ, ಲಕ್ಷಣವಾಗಿರುತ್ತೆ ಅಂತಾ, ನಗು ನಗ್ತಾ ಹೇಳಿಬಿಟ್ಳು.

ಥೂ, ಸುಮ್ನೆ ಗೊಣಗುಟ್ಬ್ಯಾಡೀಂದ್ರೆ!

ಹೂಂ, ಅಲ್ಲಾಕಣೇ! ಆಯಾಯ ಡಬ್ಬಗಳ ಮೇಲೆ ಆಯಾಯ ಸಾಮಾನಿನ ಪಟ್ಟೀನಾದ್ರೂ ಅಂಟ್ಸ ಬಾರ್ದ್ದೇನೆ? ಬೇಳೆ ಕುದ್ದೋಯ್ತು. ಸಧ್ಯ ಸಿಕ್ತಪ್ಪ—ಮೆಣ ಸಿನ ಪುಡೀದು! ಎಷ್ಟು ಹಾಕ್ಲೆ ಮೆಣಸಿನ ಪುಡೀನ? ಒಂದು ಬೊಗ್ಸೆ ಹಾಕ್ಲೇನೆ? ಒಂದರ್ಧ ಕಲ್ಸೋರೆ ಸಾರು ಮಾಡಿದ್ರೆ ಸಾಕಾಗುಲ್ವೇನೆ?

ಹೂಂ, ಮೊದಲೊಂದು ಹಿಡಿಯಷ್ಟು, ಮೇಲೊಂದು ಸ್ವಲ್ಪ—ಒಂದು ಚಮ್ಚ ದಷ್ಟು ಮೆಣಸಿನ ಪುಡೀ ಹಾಕಿ, ಕಲ್ಸೋರೆ ಮೇಲೆ ಆ ತಟ್ಟೇ ಮುಚ್ಚಿ ಬಿಡೀಂದ್ರೆ!

ಹೂಂ, ಹಾಗೇ ಮಾಡ್ತೀನಿ, ತಟ್ಟೆಯೆಲ್ಲಿಟ್ಟಿದೀಯೆ?

ಅಲ್ಲೇ ನೆಲುವಿನ ಮೇಲೆ, ಹಾಲಿನ ಮಡಕೇ ಮೇಲೆ ಮುಚ್ಚಿಲ್ವೇಂದ್ರೆ!

ಹೂಂ, ಸರಿ ಸಿಕ್ಕಿತು, ಥೂ! ಹಾಲೂ ಚೆಲ್ಹೋಯ್ತು ಮಧ್ಯಾಹ್ನ ಕಾಫೀ ಗೇನಪ್ಪ ಗತಿ!

ಏನವಸರಾಂದ್ರೆ, ಕೊಂಚವಾದ್ರೂ ನಿಧಾನವೇ ಬೇಡ್ವೆ? ಆತ್ರಾಂದ್ರೆ ಆತ್ರ!

ಹ್ಞೂ, ಮುಚ್ದೆ ಕಣೆ—ಹುಣ್ಸೆ ಹಣ್ಣಿಂದೆಲ್ಲಿ?

ಅಲ್ಲೇ ಆ ಬಡ್ಡಿನ ಕೆಳ್ಗೆ, ಅಂಚು ಕಿತ್ಹೋಗಿರೋ ಆಸಣ್ಣ ಕುಕ್ಕೇಲಿ ಲ್ಪೇಂದ್ರೆ!

ಹೂಂ, ಸಿಕ್ತು, ಯಾತ್ರಲ್ಲಿ ನೆನೇ ಹಾಕೊದೇ?

ಅಲ್ಲಿ ಯಾವ್ದಾದ್ರೂ ಒಂದ್ಸಣ್ಣ ಗಂಜು ತಗೊಳೀಂದ್ರೆ!

ಏನೇ, ಈ ಸಣ್ಣ ಗಂಜಲ್ಲಿ ನೆನೆ ಹಾಕಿದೀನಿ!

ಕಲಾಯಿ ಇದೇ ತಾನೇ?

ಅಯ್ಯೋ ತಥ್, ಮೊದ್ಲೇ ಹೇಳ್ಬೇಡ್ವೇನೆ! ತಥ್, ಸಾಕಪ್ಪಾ ಸಾಕು!

ಅಲ್ಲೇ ದೇವ್ರ ಮುಂದಿರೋ ಆ ಬೆಳ್ಳಿ ತಟ್ಟೇಗಾದ್ರೂ ಸುರೀರೀಂದ್ರೆ!

ಹ್ಞೂ, ತಟ್ಟೆಯೆಲ್ಲಾ ಅರಸಿನ ಕುಂಕುಮವಾಗಿದೆಯಲ್ಲೇ!

ಹ್ಞೂ—ನೆನ್ನೆ ಮಂಗಳ ಗೌರೀ ವ್ರತಕ್ಕಿಟ್ಕೊಂಡಿದ್ದನಲ್ಲಾಂದ್ರೆ—ಅಲ್ಲೇ ಸ್ವಲ್ಪ ನೀರು ಹಾಕಿ ಗಲವರಿಸಿಕೊಂಡುಬಿಡಿ!

ಹ್ಞೂ ಆಯ್ತು, ನಂಗೆ ಬೇಳೆ ಕಿವುಚಕ್ಕೆ ಬರೋಲ್ಲಕಣೆ!

ಅಯ್ಯೋ, ಆ ಸಣ್ಣ ಕೈಮಂತು ತಗಂಡು ಸ್ವಲ್ಪ ಕಡ್ದುಬಿಡೀಂದ್ರೆ!

ಮಂತೆಲ್ಲಿಟ್ಟಿದೀಯೆ!

ಅಲ್ಲೇ ಆ ಸ್ಟ್ಯಾಂಡ್ ಮೇಲೆ!

ಕಲ್ಸೋರೆ ಒಲೇ ಮೇಲಿರೋವಾಗ್ಲೆ ಕಡದು ಬಿಡ್ಳೋದು ತಾನೇ!

ಹ್ಞೂ—

ಅಯ್ಯೋ ಬಿಸಿ! ಮುಖಕ್ಕೆ, ಮೈ ಕೈಗೆಲ್ಲಾ, ಬಟ್ಟೆ ಬರೆಗೆಲ್ಲಾ ಆಯ್ತಲ್ಲೇ

ಹೋಗ್ಲಿ, ಸಾಕೂಂದ್ರೆ, ಅನ್ನವಾಯ್ತೆ ನೋಡಿ ಸಣ್ಣ ಒಲೇ ಮೇಲಿಟ್ಟಿದ್ದನ್ನ ನೋಡಿದ್ರೋ ಇಲ್ಲವೋ!

ಅಯ್ಯೋ ಮರ್ತೇಹೊಯ್ತು! ತಡ್ಯೇ!

ಸ್ವಲ್ಪ ಕೊಳ್ಳಿ ಮುಂದಕ್ಕೆ ನೂಕಿ ಅನ್ನದ ತಪ್ಪಲೆ ಸರಿಯಾಗಿಟ್ಟು ತೊಳ ಸೀಂದ್ರೆ!

ತೊಳಸ್ತೀನಿ—ಬಿಗ್ತಗಂಡ ಬಿಟ್ಟಿದ್ಯಲ್ಲೆ!

ಇನ್ನಷ್ಟು ನೀರು ಹಾಕೀಂದ್ರೆ

ಒಂದೆರ್ಡು ಲೋಟ ಹಾಕ್ಲೆ?

ಹಾಕಿಬಿಟ್ಟು ತೊಳ್ಸಿ—ಅನ್ನ ಆಮೇಲೆ ಮೆಡ್ಡೆ ಮೆಡ್ಡೆಯಾಗುತ್ತೆ ಚೆನ್ನಾಗಿ ತೊಳಸಿ ಕೆಳಕ್ಕಿಟ್ಟುಬಿಡಿ.

ಸಾರೂ ಆಯ್ತು. ಅನ್ನವೂ—ಆಯ್ತು ನಿಂಗೆ ಬಡ್ಸಿಬಿಟ್ಟು ನಾ ಕೂತ್ಕೊತೀನಿ! ಆಗ್ಲೆ 11½ ಗಂಟೆ—ಆಫೀಸಿಗೆ ಸ್ವಲ್ಪ ಹೊತ್ತಾಗುತ್ತೆ ಆದ್ರಾಗ್ಲಿ!

ಅಯ್ಯೋ ಅಯ್ಯೋ ಈಚ್ಗೇ ತಗಂಬನ್ನಿ, ಇಬ್ರೂ ಇಲ್ಲೇ ಊಟಮಾಡೋಣ! ಒಳ್ಗಿಂದ ಒಂದೂಟದ ಎಲೆ ತಗಂಬನ್ನಿ! ಇಲ್ಲಿ ಹಾಕಿ! ನೀವೂ ತಟ್ಟೆ ಹಾಕ್ಕಳ್ಳಿ!

ಲೇ—ತುಂಬಾ ಹೊಟ್ಟೇ ಹಸಿವು ಕಣೇ

ಅನ್ನ ಸಾಕೇನೆ—ಒಂದೇ ಸಲ ಹಾಕಿಬಿಡ್ತೀನಿ, ನೋಡು ಅನ್ನ ಹೇಗಿದೆ!

ಚೆನ್ನಾಗಿದೆ, ಒಳ್ಳೇ ಮೆತ್ಗೆ, ಮೆಡ್ಡೆಯಾಗಿದೆ!

ಅಲ್ವೇ, ಬೆಂದಿಲ್ವೇನೆ?

ಪರವಾಯಿಲ್ಲ, ಅಂಚಿನಲ್ಲಿದ್ದ ಭಾಗ, ಒಕ್ಕಡೆ, ಬೆಂದಿಲ್ಲಾಂತ ಕಾಣುತ್ತೆ. ಸ್ವಲ್ಪ ಅರಬೇಕಲು!

ಹೂಂ, ಹೇಗೋ, ಸಾರು ಹಾಕ್ತೀನಿ—

ಹ್ಞೂ—ಹಾಕೋರಂತೆ, ಸ್ವಲ್ಪ ನೀರು ಬೇಕೂಂದ್ರೆ ಕುಡಿಯೋ ನೀರು. ಆ ಬಿಂದ್ಗೇಲಿದೆ—

ಎಲ್ಲಿ, ಆ ಬಿಂದ್ಗೇಲಿದ್ದ ನೀರನ್ನ, ಅನ್ನಕ್ಕೆ, ಸಾರ್ಗೆ, ಕೈ ತೊಳೆದುಕೊಳ್ಳಕ್ಕೆ ಉಪಯೋಗಿಸಿಕೊಂಡು ಬಿಟ್ಟೆ!

ಸರಿ, ನಡುಮನೇ ಕೊಳದಪ್ಪಲೇಲಿರೋ ನೀರೇ ಗತಿ? ನಲ್ಲೀಲಿ ನೀರೂ ನಿಂತ್ಹೋಯ್ತು!—ಕೈ ಬಾಯಿ ತೊಳ್ಯೋ ನೀರು! ಆದ್ರಾಗ್ಲಿ ತಂದು ಹನ್ಸಿ!

ಮಜ್ಜಿಗೇ ಎಲ್ಲೀಂದ್ರೆ, ತಂದಿಟ್ಕೊಳ್ಳಿ, ಅಲ್ಲೇ ದೇವ್ರ ಗೂಡ ಹತ್ರ ಇದೆ!....

ಹ್ಞೂ—ಸಾರುಹಾಕಿ!

ಚೆನ್ನಾಗಿದೆಯೇನೆ!

ಅಯ್ಯೋ, ಹುಳಿ, ಖಾರಾಂದ್ರೆ—ಖಾರಾ. ಉಪ್ಪೇ ಹಾಕಿಲ್ವಲ್ಲಾಂದ್ರೆ! ಹೋಗಿ ಆ ಪಕ್ಕದ ಮನೆ ತಾರನ್ನಾದ್ರೂ ಕೂಗೀಂದ್ರೆ ಸ್ವಲ್ಪ ಉಪ್ಪು ತರಿಸೋಣ!

ನೀನೇ ಕೂಗು—

ತಾರಾ, ತಾರಾ,—ಯಾತ್ರಲ್ಲಾದ್ರೂ ಒಂದ್ಸಣ್ಣದ್ರಲ್ಲಿ ಉಪ್ಪು ಸಾಲ ಇಸ್ಗಂಡು ಬಾಮ್ಮಾ, ನಿಮ್ಮಮ್ಮನ್ಹತ್ರ!

ಈಗ ಸಾರು ಚೆನ್ನಾಯ್ತೇನೇ!

ಸಾಕು, ಸುಮ್ನಿರಿ, ನೀವೋ, ನಿಮ್ಮಡ್ಗೆಯೋ—ಊಟ ಮಾಡಿ ನೋಡಿ, ನನ್ನಡಿಗೆ ಹಳೀತೀರಲ್ಲ! ನೀವು ಮಾಡ್ದ ಅಡಿಗೇನ ನೀವೇ ಊಟಮಾಡಿ ನೋಡಿ!

ಪರವಾಯಿಲ್ಲ ಕಣೆ, ಸಾರು ಸುಮಾರಾಗಿತ್ತು—ಇದ್ನೆಲ್ಲ ಹಾಗೇ ಇಟ್ಟಿರ್ರಿತೀನಿ, ನಾನು ಮುಸುರೆ ಗಿಸರೆ ತೊಳ್ಯಲ್ಲ, ಮಹರಾಯ್ತಿ, ಪುಣ್ಯಾತಗಿತ್ತಿ ಬೆಳಗ್ಗೆ ಕಾಫೀ ನಾದ್ರೂ ಮಾಡ್ಕೊಟ್ಟು ಕೂತ್ಕೊಂಡೆಯಲ್ಲ!

ಸಧ್ಯ ಹೇಗಪ್ಪ ಇನ್ನೂ ಎರಡು ದಿನ ಕಳೆಯೋದು! ಥೂ, ಹಾಳು ಫ-ಜೀ-ತಿ.

ಶ್ರೀ ಜಿ. ಪಿ. ಸು.



" ಎಷ್ಟೊತ್ತೋ ತಲೆ ಬಾಚೋದು, ಎಷ್ಟೊತ್ತೋ ತಲೆ ಬಾಚೋದೂಂತ ಅವನ್ನಾಕೆ ಗೋಳಾಡಿಸ್ತೀರ? ನಿಮ್ಗೇನು ಹೊಟ್ಟೇಕಿಚ್ಚು ಅವನು ತಲೆ ಬಾಚ್ಕೊಂಡ್ರೆ....?"

ಅನರ್ಥ ಕೋಶ

ಹಣ : ಮಾವಂದಿರನ್ನು ಹೆದರಿಸಿದರೆ ಉದುರುವ ಪದಾರ್ಥ

ಹಬ್ಬ : ಅಜೀರ್ಣ ನಾಟಕದ ಪೀಠಿಕಾ ಪ್ರಕರಣ

ಹರಕು : ಭಾರತೀಯರ ನ್ಯಾಷನಲ್ ಯೂನಿಫಾರ್ಮ್

ಹಸು : ಪುರಾಣ ಮಿತ್ಯೇವ ನ ಸಾಧು ಸರ್ವಂ

ಹಾಡು : ಅನೇಕರು ತಮ್ಮ ಒಳಗಿನ ಸಂಕಟವನ್ನು ಈ ಮೂಲಕ ತೋಡಿಕೊಳ್ಳುತ್ತಾರೆ. ಆದ್ದರಿಂದ ಅದನ್ನು ಕೇಳುವುದಕ್ಕೆ ಹೋಗುವವರು ಹುಷಾರಾಗಿರಬೇಕು.

ಹಾರ್ಮೋನಿಯಂ. ಒಂದು ಭಯಂಕರ ಸಂಗೀತ ಸಾಧನ; ಇದಕ್ಕಿಂತ ಭಯಂಕರವೆಂದರೆ, ಬಾಯಿ ಹಾರ್ಮೋನಿಯಂ, (ಅಂದರೆ, ಬಾಯಿ + ಹಾರ್ಮೋನಿಯಂ)

ಹಾಸ್ಯ : ಎದೆ ಹುಣ್ಣಿಗೆ ಒಳ್ಳೆಯ ಮುಲಾಮು

ಹುಚ್ಚು : ಸ್ವತಂತ್ರ ಬುದ್ಧಿ

ಹೊಗಳು ಭಟ್ಟ : ಬೆನ್ನ ಹಿಂದೆ ಹೇಳಲು ಬಾಯಿ ಬರದ್ದನ್ನು ಎದುರಿಗೆ ಬಂದು ಹೇಳುವ ಹೇಡಿ

ಹೊಟ್ಟೆ : ಉರಿಯ ಉಗಮಸ್ಥಾನ

ಹೊಳೆ : "ಕಾಲಿಲ್ಲದೆ ಹರಿಗುಂ; ತೋಳಿಲ್ಲದೆ ಹೊರಗುಂ; ನಾಲಗಿಲ್ಲದೆ ನುಡಿಯುಂ"

ಹೆಂಡ : ಯುದ್ಧ ಸಾಮಗ್ರಿಗಳಲ್ಲಿ ಅತಿ ಮುಖ್ಯವಾದ ಒಂದು ದ್ರಾವಕ

ಹೇಡಿತನ : ಈ ಕಾಯಿಲೆ ಬಂದರೆ, ಬುದ್ಧಿ ತಲೆಯೊಳಗಿಂದ ಕಾಲಿಗಿಳಿಯುತ್ತದೆ.

ಶಾರಾಂಕ.

ಬುದ್ಧಿ !

ಕುಮಾರ ಕಂಠೀರವ ಬೆಳಗ್ಗಿನಿಂದ ರೋತೆ ಶುರುಮಾಡಿದ್ದ 'ಆಕೆ'ಯ ದಾಕ್ಷಿಣ್ಯಕ್ಕಾಗಿ ಪಾವಧೂಳಿಯಿಂದ ಕುಮಾರ ಕಂಠೀರವನನ್ನು ಪಾವನಗೊಳಿಸಲು ಹೆದರಿ ಹೊರಗೆ ಕರೆದುಕೊಂಡು ಬಂದರು ರಾಯರು. ತಲೆಯಮೇಲೆ ಕುಕ್ಕೆ ಹೊತ್ತಿದ್ದ ಹಣ್ಣುಮಾರುವವನು 'ಸೇಬು' ಕಾಬೂಲ್ ಸೇಬೂೕೕ, ಎಂದು ಕೂಗುತ್ತಾ ಶನಿ ವಕ್ರಿಸಿದಂತೆ ಮನೆ ಮುಂದೆ ಬಂದ. ಹುಡುಗನನ್ನು ಕಂಡ ಕೂಡಲೇ ಅವನಿಗೆ ಹೊಸ ಸ್ಫೂರ್ತಿ ಬಂದಂತಾಯ್ತು; ಇನ್ನೊಮ್ಮೆ ಅರಚಿದ.

'ಅಪ್ಪಾ ! ನಂಗೆ ಸೇಬು' ಕುಮಾರ ಕಠೀರವ ಆರಂಭಿಸಿದ. ಸೇಬು ಕೊಡಿಸಿ ಸುಮ್ಮನಾಗಿಸಬೇಕು, ಇಲ್ಲವೆ ಚಿವುಟಿ ಹೆದರಿಸಬೇಕು. ಚಿವುಟಿದರೆ ಮತ್ತೆ ಗುಡುಗು, ಮಳೆ. ಗತ್ಯಂತರವಿಲ್ಲದಾಯ್ತು. ಚೌಕಶಿಮಾಡಿ ಒಂದು ಸೇಬನ್ನು ಕೊಂಡು ಪುತ್ರರತ್ನದ ಕೈಗಿತ್ತರು. ತನ್ನ ಅಸ್ತ್ರದ ಪ್ರಭಾವಕ್ಕೆ ಮನಸ್ಸಿನಲ್ಲೇ ಸಂತೋಷಗೊಳ್ಳುತ್ತಾ ಕುಮಾರ ಹಣ್ಣನ್ನು ಕಚ್ಚಿ ತಿನ್ನಲಾರಂಭಿಸಿದ . ....

ಎತ್ತಿನ ಗಾಡಿಯ ಮೇಲೆ ಬೆಟ್ಟದೆತ್ತರ ಒಣಹುಲ್ಲಿನ ರಾಶಿ ಹಾಕಿಕೊಂಡು ಹಳ್ಳಿಯವ ಮನೆ ಮುಂದೆ ದಾಟುತ್ತಿದ್ದ. ದನದ ಕೊಟ್ಟಿಗೆಯಲ್ಲಿ ಹುಲ್ಲು ಮುಗಿದುದ್ದನ್ನು ನೆನೆದು 'ಹೆಂಗೊ ಹುಲ್ಲು ?' ಎಂದು ಕೇಳಿದರು ರಾಯರು.

ಅವನು ಗಾಡಿ ನಿಲ್ಲಿಸಿ ಪಿಂಡಿಯೊಂದನ್ನೆತ್ತಿ 'ನೋಡಿ ಸ್ವಾಮಿ' ಎಂದ ಪಿಂಡಿ ದಪ್ಪನಾಗಿದ್ದರೂ 'ಏನೋ ಇಷ್ಟು ಸಣ್ಣಕ್ಕೆ ಪಿಂಡಿ ಕಟ್ಟಿದ್ದೀಯ' ಎಂದು ಗೊಣಗಿದರು.

'ಇಲ್ಲ ಸ್ವಾಮಿ. ಇದಕ್ಕಿಂತ ದಪ್ನಾಗಿ ಇನ್ಯಾರ್ ಕಟ್ತಾರೆ ? ಮೂರೇ ರೂಪಾಯಿ ಸ್ವಾಮಿ ನೂರ್ಪಿಂಡಿಗೆ.' ಎಂದು ಗಾಡಿಯವ ವಾದಿಸಿದ.

'ಯಾಕೋ ! ಬಹಳ ದುಬಾರಿ ಕಣೋ.'

ಹುಲ್ಲಿನ ರಾಶಿಯ ಎತ್ತರವನ್ನು ನೋಡಿ ವಿಸ್ಮಯಭರಿತನಾಗಿ ಸೇಬಿನ ಹಣ್ಣನ್ನು ತಿನ್ನುವುದನ್ನೂ ಮರೆತಿದ್ದ ಕುಮಾರ ಕಂಠೀರವನೆಂದ—'ಏನಪ್ಪ ! ಇಷ್ಟು ಚಿಕ್ಕ ಸೇಬಿಗೆ ಐದಾಣೆ ಕೊಟ್ಟೆ, ಅಷ್ಟೊಂದು ಹುಲ್ಲಿಗೆ ಮೂರು ರೂಪಾಯಿ ಜಾಸ್ತೀನಾ ?'

ರಾಯರು ಮರು ಮಾತಾಡದೆ ನೂರು ಪಿಂಡಿಯನ್ನು ಹಾಕಿಸಿಕೊಂಡರು.

ವಸುದೇವ್ ಭೂಪಾಲಂ.

⊰ ಮಾತಿನ ಯುಗ ಮುಗಿಯಿತು ! ⊱

(ಒಂದು ಉಪನ್ಯಾಸ ಖಂಡ)

—o—

........ಆಗಲೇ ತುಂಬ ಹೊತ್ತಾಗಿದೆ ಎಂಬುದನ್ನು ನಾನು ಬಲ್ಲೆ. ಕ್ಷಮಿಸ ಬೇಕು. ನಾಲ್ಕೇ ನಾಲ್ಕು ಮಾತಿನಲ್ಲಿ ಮುಗಿಸಿ ಬಿಡುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ, ಮಾತಿನ ಯುಗ ಮುಗಿಯಿತು. ಮುಗಿದಿದೆ; ಮತ್ತೆ ಬರುವಂತಿಲ್ಲ. ಮೂಕರೆಲ್ಲ ವಾಚಾಲರಾಗಿ, ವಾಚಾಲರೆಲ್ಲ ಮೂಕರನ್ನು ಮೂದಲಿಸುತ್ತಿದ್ದ ಕಾಲ ಮರಳಿ ಬರುವುದಿಲ್ಲ. ನಮ್ಮ ಕರುಳು ಬೇಯುವಾಗ, ನಮ್ಮ ಕೊರಳು ಕಟ್ಟಿರುವಾಗ, ನಮ್ಮ ಕಿವಿಗಳಲ್ಲಿ ಕಠೋರ ಚೀತ್ಕಾರದ ಕರಾಳ ಮಾರ್ದನಿಗಳು ಗುಮುಗುಮಿಸುತ್ತಿರುವಾಗ, ಮಾತಿಗೆ ಅವಕಾಶವೆಲ್ಲಿಯದು ? ಬಂಗಾಳದ ಬರಗಾಲವನ್ನು ನೆನೆಯಿರಿ. 14, 18, 39, 45, 42 ಈ ಮಹಾದುರಂತ ಸಂವತ್ಸರಗಳ ಮಾನವೀ ಸಮಾಜ ಯುಜ್ಞಗಳನ್ನು ನೆನೆಯಿರಿ. ಮಹನೀಯರೇ (ಕೂತುಕೊಳ್ಳಿ. ಕೂಗಬೇಡಿ) ನಮ್ಮದು ಕರ್ಮ ಭೂಮಿ. ಶಬ್ದ ಭೂಮಿ ಅಲ್ಲ. ನಮ್ಮದು ಕರ್ಮಯೋಗ; ಕರ್ಮಣ್ಯೇವಾಧಿಕಾರ; ನಮ್ಮದು ಕರ್ಮಕಾಂಡ. ಇದನ್ನು ಎಷ್ಟು ಹೇಳಿದರೂ ತೀರದು, ಎಷ್ಟು ವಿವರಿಸಿದರೂ ಸಾಲದು. "ಸಾವಿರ ಮಾತಿಗಿಂತ ಒಂದು ಸಣ್ಣ ಕೆಲಸಕ್ಕೆ ಸರ್ವೇಶ್ವರನು ಬೆಲೆ ಕೊಡುತ್ತಾನೆ" ಎಂಬುದನ್ನು ನಾವು ಎಷ್ಟು ಕಡೆ ಎಷ್ಟು ವೇದಿಕೆಗಳ ಮೇಲಿಂದ ಎಷ್ಟು ಉಪನ್ಯಾಸಗಳಲ್ಲಿ ಎಷ್ಟು ಪ್ರಚಂಡ ಭೇರಿನಾದದಿಂದ ಕಟುತರ ಟೀಕಾ ಸಹಿತವಾಗಿ ನವನವೋನ್ಮತ್ತತೆಯಿಂದ ಪ್ರಚಾರ ಮಾಡಿದರೂ ಸಾಲದಾಗಿದೆ. "ಮಾತು ಮುಗಿಸಿ ! ಕೆಲಸದಲ್ಲಿ ತೊಡಗಿ" ಇದೇ ನಮ್ಮ ಇಂದಿನ ಗುರಿ, ಗೀತೆ, ಗಾಯತ್ರಿ, ಇದೇ ನಮ್ಮ ನವಭಾರತದ ಗತಿ, ಪ್ರಗತಿ. ಕನ್ನಡದ ಹೊಸಾಹೊಸ ಮಾತಿನಲ್ಲಿ ಹೇಳುವುದಾದರೆ, ಇದೇ ನಮ್ಮ ಪ್ರಪ್ರಗತಿ ! ಇದೇ ನಮ್ಮ ಮಹಾವಾಕ್ಯ, ಮಾನಸ ಸರೋವರ, ಅನ್ನಪೂರ್ಣೆ, ಎಲ್ ಡೊರಾಡೊ, ವಲ್ ಹಲ್ಲ. (ಆಯಿತು ! ಮುಗಿಸಿ ಬಿಡುತ್ತೇನೆ) ಕಾರ್ಯ, ಕರ್ಮ, ಕೆಲಸ, ರಚನೆ, ಸೇವೆ, ಸಾಧನೆ, ಯೋಜನೆ,—ಇವೇ ನಮ್ಮ ನಾಡಿನಾಡಿಯ ನವ ಚೈತನ್ಯ. ಮಾತು ಸಾಕು. ಬಣ್ಣ ಬಣ್ಣದ ಶಬ್ದ ವೈಖರಿಯಿಂದ ನಿಂತು ಆಡಿದ್ದು ಸಾಕು; ರಂಗುರಂಗಿನ ಕುಚೋದ್ಯದಲ್ಲಿ ಕೂತು ಲೇಖಣಿ ಆಡಿಸಿದ್ದು ಇನ್ನು ಸಾಕು. ಬಸವಣ್ಣನವರು ಹೇಳಿದ್ದೇನು ? ತನ್ನ ಬಣ್ಣಿಸಬೇಡ; ಅನ್ಯರಿಗೆ ಅಸಹ್ಯಬೇಡ. ನಾವು ಮಾಡುವುದೇನು ? ತನ್ನ ಬಣ್ಣನೆ ! ಅನ್ಯರ ತೆಗಳಿಕೆ. ಇದನ್ನು ಲೋಕ ಮೆಚ್ಚದು. ಅಷಾಢಭೂತಿಗಳ ಅವಾಂತರದ ಅಂತ್ಯಕಾಲ ಬಂದಿದೆ. ವಾಚಾಲರ ವಧೆಗೆ ನಾಂದಿಯಾಗುತ್ತಿದೆ. (ಒದೇ ಒಂದು ನಿಮಿಷ) ನಮಗೇಕೆ ಈ ಮಾತಿನ ಮಕುಟ ? ಈ ಮಾತಿನ ಮಲ್ಲರ ಸೆಣೆಸಾಟ ? ಈ ಅಕ್ಷರಗಳ ನಶ್ವರ ಸಮುದ್ರ ? ಈ ಗ್ರಂಥಗಳ

ಜೋಗ !? ಈ ಶಾಯಿಯ ನಯಾಗರ? ಈ ಎಂಜಲ ಎರಚಾಟ? (ದಯಮಾಡಿ ಕ್ಷಮಿಸಿ ಕೂತುಕೊಳ್ಳಿ) ಮಹನೀಯರೇ! ನಮ್ಮ ಅಸ್ಥಿ, ನಮ್ಮ ಭಾರ, ನಮ್ಮ ಸ್ತಂಭ, ನಮ್ಮ ಬೋದಿಗೆ, ನಮ್ಮ ಭುವನೇಶ್ವರಿ, ಇವೆಲ್ಲ ಕಾರ್ಯ, ಕೆಲಸ, ದುಡಿತ, ಉದ್ಧಾರ, ಒದ್ದಾಟ. ಬೈದಾಟವಲ್ಲ; ಬಾಯಾಟವಲ್ಲ.

(ಇನ್ನು ಒಂದೇ ಒಂದು ಮಾತು) ದುಡಿತವೇ ನಮ್ಮ ದೇವರು; ಮಾತೇ ನಮ್ಮ ಮಾರಿ. ಈ ಸಂದೇಶವನ್ನು ನಾವು ಕಡು ಬಡವರ ಹುಲ್ಲು ಗುಡಿಸಲ ಹರಕು ಜೋಪಡಿಯ ಮೇಲೂ ಬೆಳಗಿಸಬೇಕು. ಸಂಪರನ್ನಾದಿಗಳಿಂದ, ವಾಗ್ಮಿಗಳಿಂದ, ಮಾರುದ್ದ ಮಾತು ಬೆಳೆಸುವವರಿಂದ ಇದು ಸಾಧ್ಯವೆ? ಈ ಸಂದೇಶವನ್ನು ಶ್ರೀಮಂತರ ಸಿಮೆಂಟ್ ಕಾಂಕ್ರೀಟ್ ಸೌಧಗಳ ಸೈನ್ ಬೋರ್ಡುಗಳ ಮೇಲೂ ನಾವು ನಿಯಾನಿಸಬೇಕು. ವಾಷಿಂಗ್‌ಟನ್ನಿನ ಶ್ವೇತ ಹೌಸಿನ ಮೇಲೆ ಈ ಬಾವುಟ ಹಾರಾಡಬೇಕು; ಲಂಡನ್ನಿನ ಶ್ವೇತ ಹಾಳಿನ ಮೇಲೆ ಇದೇ ಬಾವುಟ ಹಾರಾಡಬೇಕು; ಚುಂಗ್‌ಕಿಂಗಿನ ಪೀತ ಭವನದ ಮೇಲೂ ಇದೇ ಬಾವುಟ ಹಾರಾಡಬೇಕು; ಡೆಲ್ಲಿಯ ನಾಥ ಭವನದ ಮೇಲೂ ಇದೇ ಬಾವುಟ ಏಕೆ ಹಾರಾಡಬಾರದು? ಇಂದಿನಿಂದ, ಯಾವ ಭಾರತೀಯನೇ ಆಗಲಿ, ಏಕೆ, ಯಾವ ಜಾಗತಿಕನೇ ಆಗಲಿ, ಕಾರ್ಯರಂಗದ ಮುಂದೆ ನೋತ ಶಬ್ದಶಿಂಗನೇ ಸರಿ. ಬಾಂಧವರೆ! ಸೋದರರೆ! ಏರುಕಟ್ಟಿ, ಹೃದಯ ವೀಣೆಯ ತಂತಿಯನ್ನು ಮೀಟಿ. ನೊಗಕ್ಕೆ ಭುಜ ಕೊಡಿ. ಅಯ್ಯೋ! ಹಸಿದವರ ಹೊಟ್ಟೆಗೆ ಅನ್ನ ನೀಡಲಾರದ ನಾವು ಅವರ ಪಿತ್ತ ತುಂಬಿದ ಲಿವರ ಮೇಲೆ ಕವನ ಕಟ್ಟುತ್ತಿದೇವೆ. ಬಡವರ ಬಡತನದ ಮೇಲೆ ಕಾದಂಬರಿಗಳನ್ನು ಬರೆದು ಕಾಸು ಮಾಡುತ್ತಿದೇವೆ. ಅವರ ವಾಯು ತುಂಬಿದ ಜಠರದ ಮೇಲೆ ನಾಟ್ಯವಾಡುತ್ತಿದೇವೆ. ಶ್ಲೇಷ್ಮ ಮುಚ್ಚಿದ ಲಂಗುಗಳ ಮೇಲೆ ಲಂಗುಲಗಾಮಿಲ್ಲದೆ ಕಥೆಕಂತೆಗಳನ್ನು ಹೇರುತ್ತಿದೇವೆ. ಮಹನೀಯರೇ! ಈ ಮಾತಿನ ಸುರಿಮಳೆ ಎಂದು ನಿಲ್ಲುವುದೋ ಅಂದು ನಮಗೆ ಮೋಕ್ಷ. ಅಂದು ನಮಗೆ ಬಿಡುಗಡೆ. ಬಳಲಿದವರಿಗೆ ದೀನದಳಿತರಿಗೆ ಬೇಸರದಿಂದ ಬೆಂಡಾದವರಿಗೆ ಬಿಸುಸುಯ್ವರಿಗೆ ಬಾಲಗೋಪಾಲರಿಗೆ ಬಸುರಿ ಬಾಣಂತಿಯರಿಗೆ ಬೋರೇಗೌಡರಿಗೆ ನಾವು ಮಾಡುವ ಶುಶ್ರೂಷೆ ಏನು? ಮಾತಿನ ಚಮತ್ಕಾರ. ಪ್ರಾಸದ ಪ್ರಾಣಹಿಂಸೆ. ಚಿತ್ರಚಿತ್ರ ಕವನಗಳ ಚಿತ್ರ ಹಿಂಸೆ.

ಇನ್ನು ಈ ವಂಚನೆ ಸಾಕು. ಓದಲಾರದ ಕಣ್ಣಮುಂದೆ ನಾವು ಹಿಡಿವ ಮಾತಿನ ಮೂಟೆಗಳನ್ನು ಕಟ್ಟಿಡೋಣ. ಕೇಳಲಾರದ ಕಿವಿಯ ಹತ್ತಿರ ನಾವು ಕೂಗುವ ಈ ಮಾತಿನ ಮಹಾಸಂತೆಯನ್ನು ರದ್ದು ಮಾಡೋಣ. ಕ್ರಾಂತಿ ತಾಂಡವದ ಕಹಳೆಯನ್ನೂದುತ್ತ, ಕಾರ್ಯರಂಗಕ್ಕೆ ನಮ್ಮ ವಾಚಾಲರನ್ನು ಕರೆದು ಪುಟವಿಟ್ಟು ಪರೀಕ್ಷಿಸೋಣ. ಒಣಮಾತಿನವರು ಜಳ್ಳಿನಂತೆ ಹಾರುತ್ತಾರೆ. ಹಾರಿದರೆ ಹಾರಲಿ. ನಮಗೆ ಬೇಕಾದದ್ದು ಪುಟವಿಟ್ಟ ಚಿನ್ನ. ಇದೇ ಈ ತರುಣದ ಸಂದೇಶ

ಇಂದಿನ ಸಂಜೀವಿನಿ....ಇನ್ನು ಅಧ್ಯಕ್ಷರ ಅಪ್ಪಣೆ ಪಡೆದು, ಈ ಸಂದೇಶವನ್ನ ಹತ್ತು ನಿಮಿಷಗಳ ಕಾಲ ವಿವರಿಸಬೇಕೆಂದಿದ್ದೇನೆ. (ಓ! ಆಗಲೇ ಹತ್ತು ಗಂಟೆ ಅಂತ ಅಧ್ಯಕ್ಷರು ಜ್ಞಾಪಿಸುತ್ತಿದಾರೆ. ನಾಳೆ ನಾನು ಬೇರೆ ಊರಲ್ಲಿ ಇದೇ ಉಪನ್ಯಾಸ ಕೊಡಬೇಕಾಗಿರುವುದರಿಂದ, ರಾತ್ರಿ ರೈಲಲ್ಲೇ ಹೊರಡಬೇಕಾಗಿದೆ. ಕ್ಷಮಿಸಬೇಕು).

. .. .ಉಪನ್ಯಾಸಕರಿಗೆ ಹಾರ ತುರಾಯಿಗಳನ್ನರ್ಪಿಸಲಾಯಿತು. ಉಪಹಾರಾನಂತರ, ಅವರು ತಳಿರು ತೋರಣಗಳಿಂದಲಂಕೃತವಾದ ಕಾರಿನಲ್ಲಿ ರೈಲು ಸ್ಟೇಷನಿಗೆ ಬಿಜಯಮಾಡಿದರು........

(ಇಂಥ ಮಹನೀಯರು ಇನ್ನು ಇತ್ತಕಡೆ ಬರುವುದೇ ಅಸಂಭವವಂತೆ).



ಆಫಿಸರ ಹತ್ತಿರ ಉಗಿಸಿಕೊಳ್ಳಲು ಸಿದ್ಧನಾಗಿ ಬಂದ ಗುಮಾಸ್ತ.

ಯಜಮಾನಿ !

... ಅಲ್ಲ.... ಪುರಸತ್ತೇನೆ, ಸ್ವಲ್ಪ ?

ಏನು ಪುರಸತ್ತೋ ಏನೋ ! ಇದ್ದೇ ಇದೆ ಬೆಳಗಿನಿಂದ ರಾತ್ರಿವರೆಗೂ, ಕತ್ತೆ ಚಾಕರಿ ...

ಹೋಗ್ಲಿ ಬಿಡು. ' ರಾತ್ರಿವರೆಗು ' ಅಂದೆಯಲ್ಲ. ಅಷ್ಟೆ ಸಾಕು .. ಸ್ವಲ್ಪ ವಿರಾಮ ಮಾಡಿಕೊಂಡು ಬಂದ್ರೆ ಒಂದು ವಿಷಯ ಮಾತನಾಡಬೇಕಾಗಿತ್ತು........ ಅದಕ್ಕೇ ಕೇಳಿದ್ದು ಪುರಸತ್ತೇ ಅಂತ.

ಏನು ಮಹಾ ವಿಷಯ ಹೇಳಬಾರ್ದೆ ?........ ಕೆಲಸಕ್ಕೇನು ಇದ್ದೇ ಇದೆ ಬೆಳಗ್ಗೆದ್ದು ನಿಮ್ಮಮುಂದೆ ಕೂತು ಬಿಟ್ರೆ, ವಿಷಯ ಕೇಳೋಕೆ, ಬಾಕಿ ಕೆಲ್ಸ ಎಲ್ಲ ಹೇಗಾಗಬೇಕು ? ಯಾರು ಮಾಡೋರು........ ?

ಯಾಕೆ, ಆಳುಗಳಿಲ್ಲವೆ ? ಎಲ್ಲ ನೀನೇ ಮಾಡಬೇಕೆ ?

ಇದಾರೆ ಇದಾರೆ, ನಿಮ್ಮ ಆಳುಗಳು, ನಿಮ್ಮಹಾಗೆ. ಮೈ ಬಗ್ಗಿ ಕೆಲಸ ಮಾಡ್ತಾರೆಯೆ ಅವರು ? ಸಂಬಳ ದಂಡ ಅಷ್ಟೆ.

ಆಳುಗಳ ಜೋತೇಲಿ .... ನನ್ನನ್ನೂ.... ಸೇರಿಸಿಬಿಡ್ತೀಯಲ್ಲೆ .. !

ನಾನು ಹೇಳೋದು ಸುಳ್ಳೇನೊ ನೋಡಿ. ಅಲ್ಲಿ ಆ ಮೂಲೇಲಿ ಎಷ್ಟು ಕಸ ಬಿದ್ದಿದೆ ? ಒಂದು ರಾಶಿ. ಗುಡಿಸಿದಾನಂತೆ ನಿಮ್ಮ ಆಳು, ಬೋರ. ' ಏನೋ ' ಅಂದ್ರೆ ' ಕೆಲಸವೆಲ್ಲ ಆಯ್ತು ತಾಯಿ, ಮನೆಗೆ ಹೋಗ್ತೇನೆ ' ಅಂದ. ' ಹೋಗು ' ಅಂದೆ.

ಹೋಗು ಅಂತ ಯಾಕಂದೆ ? ಸರಿಯಾಗಿ ಆ ಮೂಲೇಲಿ ಕಸ ಗುಡಿಸಿ ಎತ್ತಿ ಹಾಕಿ ಹೋಗು ಅನ್ನೋದಕ್ಕಿಲ್ಲವೆ ?

ನೋಡಿದ್ರಾ, ನಂದೇ ತಪ್ಪಾಯ್ತು. ಆಳೇ ಸರಿ. ಅದಕ್ಕೇ ನಾನು ಹೇಳೋದು

ನೀನೇನು ಹೇಳ್ತೀಯೋ ಏನೋ ನನಗೊಂದೂ ಅರ್ಥವಾಗೋದಿಲ್ಲ.... ಅಲ್ಲ ... ಆಳುಗಳ ಕೈಯಲ್ಲಿ ಸರಿಯಾಗಿ ಕೆಲಸ ತೆಗಿಯೋದಕ್ಕೆ....

ನನಗೆ ಬರೋದಿಲ್ಲ. ಹೌದು. ಅಂತು ನನ್ನ ಮೇಲೇ ಆಕ್ಷೇಪಣೆ. ಆಳುಗಳನ್ನು ಯಾರು ಕೇಳಬೇಕು....? ಉಂ........ ನನಗ್ಯಾಕೆ. ಮಾತಾಡಿದರೆ ಜಗಳ ವಾಡ್ತಾಳೆ ಅಂತ ಅನ್ನೋದು. ಆಳಿಗಿಂತ ಕಡೆಯಾಗಿ ನಾನಿದ್ದೇನಲ್ಲ, ಎಲ್ಲಾ ಕೆಲಸ ಮಾಡೋಕೆ.

ಹೋಗ್ಲಿ ಬಿಡು. ಎಲ್ಲೋ ಪ್ರಾರಂಭವಾಗಿ ಯಾವ ಕಡೆಗೋ ಎಳೆದು ಕೊಂಡು ಹೋಗ್ತಾ ಇದೆ, ನಮ್ಮ ಸಂಭಾಷಣೆ. ನಂನಮ್ಮಲ್ಲಿ ಜಗಳ ಯಾಕೇ? ಕೆಲಸ ಸರಿಯಾಗಿ ಮಾಡದೇ ಇದ್ದರೆ ನಾಳೆಯೆ ವಜಾಮಾಡು ಆಳುಗಳನ್ನ. ನಿನಗೆ ಅಷ್ಟು ಯಜಮಾನ್ಕೆ ಇಲ್ಲವೆ ನಿನ್ನ ಮನೇಲಿ? .. ..ನೋಡು ನಿನ್ನ ಹಿಂದೆ ಹಿಂದೆಯೇ ಓಡಾಡಿಕೊಂಡು ಇಷ್ಟು ಮಾತಾಡಿದ್ದಕ್ಕೆ ಕಾಲುಸೋತು ಹೋಯ್ತು ನನಗೆ. ನೀನು ಹೇಗೆ ಒಂದೇ ಸಮನೆ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಓಡಾಡ್ತೀಯೋ ದೇವರೇ ಬಲ್ಲ........ನಾನು ರಾಮುರಾಯರನ್ನ ನೋಡಿದ್ದೆ ..

ರಾಮುರಾಯರನ್ನ ಯಾಕೆ ನೋಡಿದ್ರಿ ?

ಸ್ವಲ್ಪ ನಿಧಾನಿಸು, ನಾನು ಹೇಳೋವರೆಗೂ , ...ನೋಡಿದ್ಯಾ ಎಡವಿಬಿಟ್ಟೆ, ಬಹಳ ಆತುರ, ಸ್ವಲ್ಪ ಮೆಲ್ಲಗೆ ಓಡಾಡು.

ಸರಿ ಸರಿ, ಮೆಲ್ಲಗೆ ಓಡಾಡುತ್ತಿದ್ದರೆ ಆಯ್ತು... ....ಎಡವೋದಕ್ಕೇನು ದಿನಕ್ಕೆ ಇಪ್ಪತ್ತು ಸಲ ಆಗುತ್ತೆ. ಆ ಹಾಳು ಹೊಸಲು, ಉಗ್ರಾಣದ್ದು; ಆವತ್ತೇ ಹೇಳ್ದೆ ಸರಿಮಾಡಿಸಿ ಅದನ್ನ ಅಂತ. ನಿಮಗೆಲ್ಲಿ ಪುರಸತ್ತು ಹೇಳಿ. ನನ್ನ ಮಾತು ಅಂದ್ರೆ ಜ್ಞಾಪಕವಾದ್ರು ಇರುತ್ಯೆ ನಿಮಗೆ?

ನಾಳೆಯೆ, ಬೆಳಗ್ಗೆ ಎದ್ದ ತಕ್ಷಣ ಕಿತ್ತು ಹಾಕಿಸಿಬಿಡ್ತೇನೆ ಆ ಹೊಸಲನ್ನ. ಕಿತ್ತುಹಾಕಿಸಿ, ನೆಲಸಮ ಮಾಡಿ, ಸಿಮೆಂಟು ಹಾಕಿಸಿ ಬಿಡ್ತೇನೆ....ಎಲ್ಲಾ ಹೊಸಲೂ ಹಾಗೇ ಮಾಡಿಸಲೇನು?....

ಸರಿ, ಸಿಮೆಂಟಂತೆ ಸೀಮೆಂಟು,....ಜಾರೋದಕ್ಕೆ ...

ಬೇಡ ಬಿಡು ...ಪುನಃ ಎಡವಿದಾಗ ನೋಡೋಣ....ಸ್ವಲ್ಪ ನೋಡಿಕೊಂಡು ಓಡಾಡು .. ರಾಮುರಾಯರ ಮಗ ಈಸಲ ಬಿ.ಇ. ಪ್ಯಾಸು ಮಾಡಿದನಂತೆ. ನಮ್ಮ ನಾಗು ಗೆ....

ನಿಮ್ಮ ಬೀ ಯಿ, ಗೀ ಯಿ, ಹಾಗಿರಲಿ. ಹುಡುಗ ಯೋಗ್ಯನೆ ಹೇಳಿ ಮುಖ್ಯ. ಪ್ಯಾಸುಗಳಿಗೇನು ನೂರಾರು ಜನ ಮಾಡ್ತಾರೆ. ಯೋಗ್ಯರಾಗಿರಬೇಕಲ್ಲ....

ಏನೇ ಹಾಗಂದ್ರೆ, ...? ಯೋಗ್ಯರು, ಯೋಗ್ಯತೆ ಅಂತ....

ನಿಮಗೇನು ತಿಳಿಯುತ್ತೆ, ಯೋಗ್ಯತೆ ವಿಷಯ....

ಅಂದ್ರೆ! .. ನಾನು ಯೋಗ್ಯನಲ್ಲವೇನೆ?

ನಾನು ಯಾಕೆ ಹೇಳಲಿ ಅದೆಲ್ಲ.... ?

ಸರಿ ಬಿಡು ; ನನ್ನಂಥಾ ಅಯೋಗ್ಯನಿಗೂ ಮದುವೆಯಾಗಿದೆ, ಮಕ್ಕಳಾಗಿದೆ ; ಇನ್ನು-ಯೋಗ್ಯರ ವಿಚಾರ್‍ವನಮಗ್ಯಾಕೆ . ? ರಾಮುರಾಯರ ಮಗ ಬಿ.ಇ. ಪ್ಯಾಸು

ಮಾಡಿದ್ದಾನೆ, ಅಂದಮೇಲೆ ನನಗಿಂತ ಯೋಗ್ಯನಾಗಿಯೇ ಇರಬೇಕು ಅನ್ನು. ಒಳ್ಳೆ ಮನೆತನ .

ಮನೆತನ ಸರಿ ಅಂದ್ರೆ.... ಈ ಕಾಲದ ಹುಡುಗರು....

ನಾನೇನು ಪೂರ್ವಕಾಲದವನೆ ?

ಅದಕ್ಕೇ ನಾನು ಹೇಳೋದು, ಅನುಭವದ ಮೇಲೆ. ಈ ಕಾಲದ ಹುಡುಗರು....... ನಿಧಾನವಾಗಿ, ವಿಚಾರಿಸಿ ಅವರ ನಡವಳಿಕೆ ಸರಿಯಾಗಿ ತಿಳಿದುಕೊಂಡು, ಆ ಮೇಲೆ ....

ಸರಿ ಅಷ್ಟೆಲ್ಲಾ ಡಿಟೆಕ್ಟಿವ್ ಕೆಲ್ಸ ಮಾಡೋದಕ್ಕಿಂತ ಅರವತ್ತು ವರ್ಷದ ಒಬ್ಬ ಪೂರ್ವಕಾಲದವನನ್ನು ಹುಡುಕುವುದೇ ಮೇಲು. ಹೋಗಲಿ ಬಿಡು, ಈ ವರಾನ್ವೇಷಣೆ ವಿಚಾರ, ನಿನಗೇ ಧಾವಂತವಿಲ್ಲ ನನಗೆ ಯಾಕೆ ಆ ತಾಪತ್ರಯ....ಆಗ್ಲೆ ಹತ್ತು ಗಂಟೆಯಾಯ್ತು !....ಇನ್ನೊಂದು ಡೋಸು ಕಾಫಿ ...ಕೊಡ್ತೀಯಾ ? ಈವತ್ತೇನೋ ಹಸಿವು ಸ್ವಲ್ಪ ಹೆಚ್ಚಾಗಿದೆ.

ನಿಮಗೆ ಆಫೀಸಿಲ್ಲದಿದ್ದರೆ ಹಸಿವು ಹೆಚ್ಚಾಗುತ್ತೆ. ಅಡಿಗೇ ಮನೇಲೇ ಸೇರ್‍ಕೊಂಡಿರ್ತೀರಿ ರಜಾಬಂದ್ರೆ. ಕೆಲಸ ಮಾಡೋವರನ್ನೂ ಮಾಡಗೊಡಿಸದೆ ಸುಮ್ಮನೆ ಅರಚ್ತಾ ಇರೋದು....ತಿನ್ನೋದರ ಮೇಲೆ ಯೋಚನೆ ಯಾಕೋ ಒಲೇನೂ ಸರಿಯಾಗಿ ಉರೀತಾ ಇಲ್ಲ. ಸೌದೆಯೋ.....ಬರೀ ಹಸೀದು. ದುಡ್ಡು ಕೊಡೋದು ಕೊಡ್ತಾ ಒಳ್ಳೇ ಸೌದೆ ತರಬಾರ್‍ದೆ ? ಬರೀ ಹೊಗೆ....ನಿಮಗೇನು ಗೊತ್ತಾಗುತ್ತೆ. ಇದರ ಕಷ್ಟ ?

ಪಾಪ,....ಕಣ್ಣಲ್ಲಿ ನೀರು ಬಂದಿದೆಯಲ್ಲೆ ! .. ಇಲ್ಲಿ ಬಾ....

ಸರಿ, ನನ್ನ ಕಷ್ಟ ನನಗೆ ; ನಿಮಗೆ ಚಲ್ಲಾಟ....ಕಾಫಿ ತಕೊಳ್ಳಿ....ಸಕ್ಕರೆ ಸರಿಯಾಗಿದೆಯೇ ?...ಸ್ವಲ್ಪ ಹಾಲು ಸೇರಿಸಲೆ ?

ಏನೂ ಬೇಡ...ಭೇಷ್, ಬಹಳ ಚೆನ್ನಾಗಿದೆ ಕಾಫಿ, ಬೆಳಗ್ಗೇಗಿಂತ....ನೀನೂ ಕುಡಿ, ಇನ್ನೊಂದು ಲೋಟ ಇದೆಯಲ್ಲ. ಅಡಿಗೆ ಹೊತ್ತಾದರೂ ಪರವಾ ಇಲ್ಲ .. ನೀನು ರೇಗಿದಷ್ಟೂ ರುಚಿ ಹೆಚ್ಚು ನೋಡು ; ಅಡಿಗೆ, ಕಾಫಿ, ತಿಂಡಿ ಎಲ್ಲ ಹೇಗಿರುತ್ತೆ ಅಂತಿ....!

ಸಾಕು ಸುಮ್ಮನಿರಿ, ನಿಮ್ಮ ಸರಸ. ಬಾಯಿಮಾತಿನಲ್ಲಿ ಉಬ್ಬಿಸೋದಕ್ಕೇನು ....ಹೇಳಿದ ಮಾತು ಮಾತ್ರ ಕಿವೀಗೇ ಹಾಕಿಕೊಳ್ಳಬೇಡಿ.

ಅಲ್ವೆ....ನೀನೇನು ಹೇಳ್ದೆ, ನಾನೇನು ಕಿವೀಲಿ ಹಾಕಿಕೊಳ್ಳಲಿಲ್ಲ, ಅನ್ನೋದನ್ನ ಹೇಳಬಾರ್‍ದೆ ?

ಏನೂಂತ ಹೇಳೋದು ಹೇಳಿ. ಒಂದೆ, ಎರಡೆ.. ?

ಅದೆಲ್ಲ ಇರಲಿ,....ಈಗ, ಈಕ್ಷಣ ಹೇಳು ಈ ಎರಡು ಕಿವೀಲೂ. ಏನೇನು ಹೇಳ್ತಿಯೋ ಹೇಳಿಬಿಡು. ಈವತ್ತೀ, ಈಗ್ಲೇ, ಜಾರಿ ಮಾಡಿಬಿಡ್ತೇನೆ.

ಅಲ್ಲಾಂದ್ರೆ,....ಸ್ವಲ್ಪ ಅಂಗ್ಡಿ ಕಡೆ ಹೋಗಬೇಕು ಅಂತ ಎಷ್ಟು ದಿನದಿಂದ ಹೇಳ್ತಾ ಇದೇನೆ ನಿಮಗೆ?....ಅದೇನು ಅಷ್ಟು ಪುರಸತ್ತಿಲ್ಲದ ಕೆಲಸ ನಿಮಗೆ ಆಫೀಸಲ್ಲಿ? ಆರು ಗಂಟೆಗೆ ಆಫೀಸು ಬಿಟ್ಟರೆ ಆ ಮೇಲೆ ಏನ್ಮಾಡ್ತೀರಿ? ಸ್ನೇಹಿತರು ... ಫ್ರೆಂಡ್ಸು....ಜೊತೇಲಿ ಹೋಗಬೇಕೇನೊ?....ಸಿನಿಮಾ, ಹೋಟಲು ಎಲ್ಲ ಮುಗಿಸಿಕೊಂಡು ರಾತ್ರಿ ಹತ್ತು ಗಂಟೆಗೆ ಸವಾರಿ ಮನೆಗೆ ದಯಮಾಡಿಸೋದು. ಸ್ವಲ್ಪ ಅಂಗಡಿ ಕಡೆ ಹೋಗೋಣ ಅಂದ್ರೆ ಜೊತೇಲಿ ಬರೋಕೆ ಆಗೋದಿಲ್ಲ ನಿಮಗೆ. ಎಷ್ಟು ಸಲ ಗೋಗರೆಯೋದು ಅಂದ್ರೆ ನಿಮ್ಮನ್ನ....ಬೇಜಾರು.

.... ಕಾಫಿ ಕುಡಿದೆಯ? ಹೇಗಿದೆ? ಸಾಕಪ್ಪನ ಅಂಗಡಿ ಕಾಫಿ ಪುಡಿ ನಾ ತಂದದ್ದು ಮೊನ್ನೆ. ಎಲೆಕ್ಟ್ರಿಕ್ ಬಾಣಲೀಲಿ ಹುರಿದು ಮಿಷೀನಲ್ಲಿ ಪುಡಿ ಮಾಡ್ತಾರಂತೆ. ವಾಸನೆ ಸ್ವಲ್ಪವೂ ಹೋಗದೆ 'ಗಂ' ಅಂತ ಇರುತ್ತೆ. ಇನ್ನು ಮೇಲೆ ಅದನ್ನೇ ತರ್ತೇನೆ. ನಿನಗೆ ಮನೇಲಿ ಹುರಿದು ಪುಡಿ ಮಾಡೋ ತೊಂದ್ರೆ ತಪ್ಪುತ್ತೆ... ಬೆಟ್ಟಯ್ಯನ ಅಂಗಡೀಲಿ ಹೊಸದಾಗಿ ಮೊನ್ನೆ ಜವಳಿ....

ಅಲ್ಲಾಂದ್ರೆ! ಇಷ್ಟೊಂದು ಜಾಣ್ತನಾನ್ನ ಎಲ್ಲಿಂದ ಕಲ್ತಿರಿ ನೀವು?....ಕಾಫಿ ಪುಡಿ ತರೋದು ಇರ್ಲಿ........, ಇವತ್ತು ಸಂಜೆ ಅಂಗ್ಡೀಗೆ ಬರ್ತೀರಾ, ಜೊತೇಲಿ, ಅಂತ ನಾ ಕೇಳಿದ್ದು.

ಓ, ಬರದೇ ಏನು! ಷೋಕಾಗಿ ಬರ್ತೇನೆ, ಹೋಗೋಣ ಅದಕ್ಕೇನು? ಏನು ಬೇಕು ಹೇಳು.

ಷೋಕ್ ಗೀಕ್ ಮಾಡಿಕೊಂಡು ಬರಬೇಡಿ; ಸರಿಯಾಗಿ ಬನ್ನಿ........ಏನು ಬೇಕೂಂತ ಈಗ ಹೇಗೆ ಹೇಳೋದು? ಅಂಗಡೀಗೆ ಹೋಗಿ, ಕಣ್ಣಿಗೆ ಚೆನ್ನಾಗಿದ್ದರೆ ಒಂದು ...

ಅದಕ್ಕಲ್ಲ ...ಅಲ್ಲ....ಅದಕ್ಕೇನು ಆಗಬಹುದು. ಆದರೆ....ಸಾಮಾನು ಏನು ಅಂತ ತಿಳಿದರೆ ಹಣ ತರೋದಕ್ಕೆ ಅನುಕೂಲ ಅಂತ ಅಷ್ಟೆ ...

ಸರಿ ಪ್ರಾರಂಭಿಸಿ ಬಿಟ್ರಾ, ಅಂಗಡಿಗೆ ಹೋಗೋದಕ್ಕೆ ಮುಂಚೇನೆ? ಏನು ಸಾಮಾನು, ಎಷ್ಟು ಖರ್ಚು ಅಂತ? ಹೋದಹಾಗೇ ಆಯ್ತು ಇನ್ನು........

ಅಯ್ಯೊ ಮಹರಾಯ್ತಿ! ನಾನು ಹೇಳೋದೆಲ್ಲ ಅಪಾರ್ಥವೇ ಮಾಡಿಕೊಳ್ತಿಯಲ್ಲ! ...ಹೋಗಬೇಡ ಅಂದ್ನೆ?....ದುಡ್ಡು ಕೊಡೋದಿಲ್ಲ ಅಂದ್ನೆ?....ಏನೇನು ತೆಗೆದುಕೋಬೇಕೋ ಸ್ವಲ್ಪ ಸೂಕ್ಷ್ಮ ಕೊಟ್ಟರೆ ಸ್ವಲ್ಪ ಹೆಚ್ಚಾಗಿ ಹಣ ತರೋಣ ಅಂತ....

ಸ್ವಲ್ಪಾನೂ ತರಬೇಡಿ, ಹೆಚ್ಚಾಗೂ ತರಬೇಡಿ. ಹಣ ನನ್ನಲ್ಲೇ ಇದೆ; ನಾನೇ ತರ್ತೇನೆ.

ಹಣ ! .. ನಿನ್ನಲ್ಲೇ ಇದೇ !   ಎಲ್ಲೀದೇ ? ! . ಎಷ್ಟಿಟ್ಟಿದ್ದೀಯೇ ! ?

ಅದೆಲ್ಲ ನಿಮುಗ್ಯಾಕೆ ? .. ಸುಮ್ಮನೆ ನನ್ನ ಜೊತೇಲಿ ಬನ್ನಿ.

ಓ ಹೋ ಹೊ ! ಏನು ಜಂಭ ; ಏನು ಗರ್ವ ! ಒಂದು ನಾಲಕ್ಕು ಪುಡಿ ಕಾಸು ಕೈಯಲ್ಲಿಟ್ಟುಕೊಂಡು....

ಅಷ್ಟಲ್ಲದೆ ಏನು ?....ಹೌದೌದು. ನಮ್ಮಲ್ಲಿರೋದೆಲ್ಲ ಪುಡಿಕಾಸು, ನಿಮಲ್ಲಿರೋದೆಲ್ಲ ಸವರನ್ನು ...

ಅಲ್ವೇಮತ್ತೆ....... ಜಪ್ಪಯ್ಯ ಅಂದ್ರೂ ಬಾಯ್ಬಿಡೋದಿಲ್ವಲ್ಲ ನೀನು. ಎಷ್ಟು ದುಡ್ಡಿದೆ ಅಂದ್ರೆ !....ಎಲ್ಲಿಂದ ಬಂತೆ ಅಷ್ಟೊಂದು ದುಡ್ಡು ?

ದುಡ್ಡೂ ಇಲ್ಲ, ಏನೂ ಇಲ್ಲ. ಸುಮ್ಮನೆ ಕೇಳಿದ್ದನ್ನೇ ಕೇಳ್ತಾ ಇರಬೇಡಿ.

ಲೇ ...ಏನು ಯಜಮಾನಿಕೆ ಮಾಡ್ತೀಯೇ ನೀನು !....ನಾನು ಏನು ಮಾಡಿದರೂ ತಪ್ಪು ಕಂಡುಹಿಡಿತೀಯಲ್ಲೆ ! ನಾನು ಮಾತಾಡಿದರೆ, ಜಾಣ್ತನ ; ನಾನು ನೋಡಿದ ಹುಡುಗ ಯೋಗ್ಯನಲ್ಲ ; ನನ್ನ ಆಳುಗಳು, ಸೋಮಾರಿಗಳು,—ನನ್ನ ಹಾಗೆ ; ನಾ ತಂದ ಸೌದೆ ಬರೀ ಹಸಿ, ಹೊಗೆ ;....

ಇಲ್ಲ ಇಲ್ಲ, ನೀವು ಮಾಡಿದ್ದೆಲ್ಲ ಸರಿ ಅಂತಾ ಇರಬೇಕೇನೊ. ಇಲ್ಲಿ ನೋಡಿ, ಈ ಬೆಂಡೆಕಾಯಿ, ರಟ್ಟೆಗಾತ್ರ ಇದೆಯಲ್ಲ, ಯಾಕೆ ತಂದ್ರಿ ಇದನ್ನ ? ಬಲಿತು ಕಟ್ಟಿಗೆ ಇದ್ದಹಾಗಿದೆ. ನೋಡಿ, ಹೆಚ್ಚೋಕೇ ಆಗ್ತಾ ಇಲ್ಲ ! ನಾಲ್ಕಾಣೆಯೋ ಎಂಟಾಣೆಯೋ ಹತ್ತಾಣೆಯೋ ಅವನು ಕೇಳಿದಷ್ಟು ಕೊಟ್ಟು ತಂದಿರ್ತೀರಿ. ದುಡ್ಡು ದಂಡ....ನನಗೊತ್ತಿಲ್ವೆ !....ಅದಕ್ಕೇ ನಾನು ಹೇಳೋದು, ನಿಮುಗೆ ವ್ಯಾಪಾರ ಮಾಡೋದಕ್ಕೆ ಬರೋದಿಲ್ಲ ಅಂತ.

ನನಗೆ ಏನೂ ಬರೋದಿಲ್ಲ ಬಿಡು....ಬೆಂಡೇ ಕಾಯಿ, .. ಪಲ್ಯ ಬೇಡ, ಗೊಜ್ಜು ಮಾಡು. ಫಸ್ಟ್‌ಕ್ಲಾಸಾಗಿ ಮಾಡ್ತೀಯೆ, ನನಗ್ಗೊತ್ತು. ಇವತ್ತು ಬರೀ ಗೊಜ್ಜು ಅನ್ನಾನೇ ಹೊಡೆದ್ಬಿಡ್ತೀನೆ.

ಏನು ಗೊಜ್ಜೊ ; ಗೊಜ್ಜು, ಗೊಜ್ಜು, ಅಂತ ! ಗೊಜ್ಜು ಏನು ಚೆನ್ನಾಗಿರುತ್ತೆ ಅಂದ್ರೆ, ಹಾಳು ?

ಸರೀ .. ಬೇಡಾ ...ನಿನಗೇನು ತೋಚುತ್ತೊ, ಅದನ್ನೇ ಮಾಡು........ನೀನೇನು ಮಾಡಿದರೂ ಚೆನ್ನಾಗಿರುತ್ತೆ. ನೀನು ಯಜಮಾನಿ ; ಏನು ಬೇಕಾದರೂ ಅನ್ನು ನಿನ್ನ ಹತ್ರ ಮನಸ್ತಾಪ ಕಟ್ಟಿಕೊಳ್ಳೋದಕ್ಕೆ ಆಗುತ್ಯೆ ? ನೀನು ಏಳು ಅಂದಾಗ, ಎದ್ದು ಸ್ನಾನ ಮಾಡಿ ಎಲೆಮುಂದೆ ಕೂತುಕೊಳ್ತೀನೆ.

ಸರಿಹೋಯ್ತು ! ಅಡಿಗೆ ಆಗಿದೆಯೆ, ಆಗ್ಲೆ, ಬಂದು ಕೂತು ಕೊಳ್ಳೋಕೆ ಎಲೆ ಮುಂದೆ ? ಬೆಳಗಿನಿಂದ, ಇಲ್ಲೆ, ಅಡಿಗೇ ಮನೇಲೇ ಕೂತುಬಿಟ್ಟು, ವಟ ವಟ

ವಟಾಂತ ಹರಟಿ ಹೊಡಿಯ್ತಾ. ನನಗೆ ಕೈಕಾಲೇ ಆಡಗೊಡಿಸದೆ, ಅರ್ಧ ಅಡಿ ಗೇನೂ ಆಗಿಲ್ಲ ಇನ್ನೂ....

ನಿಧಾನವಾಗಿ ಆಗಲಿ ; ನನಗೇನೂ ಆತುರವಿಲ್ಲ.

ನಿಮಗ್ಯಾಕೆ ಆತುರವಿದ್ದೀತು ಹೇಳಿ, ಎರಡೆರಡು ಸಲ ಕಾಫಿ ಕುಡಿದು !........ ಏಳಿ ; ಎದ್ದು ಬೇಗ ಸ್ನಾನಮಾಡಿ , ಅಷ್ಟರಲ್ಲಿ ಎಲ್ಲ ಆಗುತ್ತೆ.

ಅಲ್ಲ,....ಅರ್ಧ ಅಡಿಗೆ ಕೂಡ...ಆಗಿಲ್ಲ ಅಂತ, ಈಗ ತಾನೆ...

ಅದೆಲ್ಲ ನಿಮ....

ಇಲ್ಲ ಇಲ್ಲ, ನನಗ್ಯಾಕೆ ಅದೆಲ್ಲ. ...ಸರಿ!...ಇಗೊ ಎದ್ದೆ, ಯಜಮಾನಿ.

ಬುಳ್ಳಿ.

ಕೆಲವು ಜೈಲುಗಳಲ್ಲಿ ಖೈದಿಗಳು ಕ್ರಿಕೇಟ್ ಆಡುತ್ತಾರಂತೆ ! .. ಆದರೆ, ಗೋಡೆ ಆಚೆ ಬಿದ್ದರೆ ಮಾತ್ರ, ಆಸಾಮಿ ಔಟ್ !

* * *

ಮೂರು ಮೈಲಿ ಫಾಸಲೆಯೊಳಗೆ ಯಾವ ಸ್ನೇಹಿತನೊಂದಿಗಾದರೂ ಮಾತ ನಾಡಲು ಅನುಕೂಲಿಸುವ ಒಂದು ಕಿಸೆ ರೇಡಿಯೋವನ್ನು ಅಮೇರಿಕನ್ನರು ತಯಾರಿಸಿ ನಮಗೆ ಮಾರುವರಂತೆ. ಆದ್ದರಿಂದ ನಾವು ಕ್ಷಿಪ್ರದಲ್ಲೇ ನಾಲ್ಕು ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದೆ. (1) ಕೊಂಡುಕೊಳ್ಳಲು ಹಣ, (2) ಮೂರು ಮೈಲಿ ಹತ್ತಿರ ಇದ್ದರೂ ಗೆಳೆಯನಾಗಿ ಉಳಿದಿರುವ ಒಬ್ಬ ಆಸಾಮಿ (3) ಅವನ ಹತ್ತಿರ ಅಂಥದ್ದೇ ಒಂದು ರೇಡಿಯೋ (4) ಆತನೊಂದಿಗೆ ಅತ್ಯಗತ್ಯವಾಗಿ ಮಾತ ನಾಡಲೇಬೇಕಾದ ಒಂದು ವಿಷಯ.

* * *

ಪಾರ್ಲಿಮೆಂಟಿನ ಲೇಬರ್ ಸದಸ್ಯರು "ಸುಲಗ್ನಾ ಸಾವಧಾನ" (Go slow) ಎಂಬ ಮುಷ್ಕರ ಪದ್ಧತಿಯನ್ನು ಪ್ರಾರಂಭಿಸುವೆವೆಂದು ಹೆದರಿಸುತ್ತಿರುವರಂತೆ....ಪರೀಕ್ಷಾರ್ಥವಾಗಿ ಅದನ್ನು ಇಂಡಿಯಾ ಚರ್ಚೆಯಲ್ಲಿ ನಡೆಯಿಸುತ್ತಿರುವರಂತೆ.

* * *

ಯೂನಿಫಾರಂ ಹಾಕಿಕೊಂಡ ಪೋಲಿಸಿನವನೊಬ್ಬ, ಮೊನ್ನೆ ಗಂಟು ಹೊತ್ತು ಯಾವ ತಂಟೆಯೂ ಮಾಡದೆ, ಸಪ್ಪೆ ಮೋರೆ ಸಹಿತವಾಗಿ, ತೆಪ್ಪಗೆ, ಕೈ ಹಿಡಿದ ಪ್ರಾಣಿ ಸಂಗಡ, ...ಸ್ಟೇಷನಿಗೆ ಹೋಗುತ್ತಿದ್ದನಂತೆ !

* * *

✤ ಕೆಲವು ನವೀನ ಗಾದೆಗಳು ✤

(ಬಸ್ಸು ಪ್ರಯಾಣದ್ದು)

—೩—

ಯಾಕಯ್ಯ ನಿಂತು ಹೋಯ್ತು? ಅಂದರೆ, ನೂಕಯ್ಯ ಕೊಂಚ, ಅನ್ನೋದೆ?

ಬಸ್ಸು ಜಾರಿ, ಆಸ್ಪತ್ರೆ ಬಾಗಿಲಲ್ಲಿ ಬಿತ್ತು!

ಬಸ್ಕರಸ್ಯ ಕುತೋ ಧರ್ಮಃ?

ಹೆಸರು ಸರ್ವೀಸು, ಮಾಡೋದು ಜೋರು!

ಓವರ್ ಲೋಡಿನವರೆಲ್ಲ ಊರಾಚೆ ಇಳಿದರೆ, ಓವರ್‌ಸಿಯರ್ ಮನೆಯವರು ಊರಲ್ಲೂ ಇಳಿಯೋಲ್ಲವಂತೆ!

ಸ್ವ ಕಾಲೇ ನಿಧನಂ ಶ್ರೇಯಃ, ಪರಲಾರೀ ಭಯಾವಹಃ।

ಪಾಪಿ ಬಸ್ಸಿಗೆ ಹೋದರೆ, ಪರ್ಮಿಟ್ಟೇ ಸಿಗಲಿಲ್ಲವಂತೆ

ಡ್ರೈವರ್ ಏರಿಗೆಳೆದರೆ, ಕಂಡಕ್ಟರ್ ನೀರೆಗೆಳೆಸಿದ

ಇಸ್ಟಾರ್ಟ್ ಮಾಡೋಕೆ ಅವನೇ ಇಲ್ಲ! ಇನ್‌ಸ್ಪೆಕ್ಟರ್ ಮನೆಗೆ ಹೋಗಬೇಕಂತೆ!!

ವಿನಾಶ ಕಾಲೆ (ಬಸ್ಸು) ವಿಪರೀತ ವೃದ್ಧಃ.

ಕೈ ತೋರಿಸಿ, ಸೀಟಿಲ್ಲ, ಅನ್ನಿಸಿಕೊಂಡರು

ಗೆದ್ದಲು ಹಿಡಿದ ಬಸ್ಸಿಗೆ, ಇದ್ದಿಲೇ ಆಹಾರ

ಇಳಿದು ನೂಕುವವನಿಗೆ ಮಳೆಯೇನು? ಚಳಿಯೇನು?

Work Shop Machinery

Lathes, Milling Machines Shapers, Drilling Machines, Capstan & Bench Lathes

Welding Equipments for

Oxy-acetylene and Electric

Rubber Hose

For Suction & Delivery Water, Pneumatic, Oxy-acetylene, Paint Spray

---

Gloves

For Acid & Alkali proof, Electric Resistance, Post Mortem

Sponge, Solid & insertion Sheetings

ANYTHING IN RUBBER PLEASE ENQUIRE:

TRADES

(TEL: SEDART)

SULTANPET

BANGALORE CITY

Owing to present conditions this advertisement does not constitute an offer for sale.

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

—o—

ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ

ಪ್ರದರ್ಶನಾರಂಭ ತಾರೀಖು 5-10-1945



''ನಂಬಿ ಕರೆದರೆ 'ಓ' ಎಂಬ ಶಿವನು''

ಸೂಪರ್	—	ಬೆಂಗಳೂರು
ಚಾಮುಂಡೇಶ್ವರಿ	—	ಮೈಸೂರು
ವಿನೋದ	—	ದಾವಣಗೆರೆ

ಮುಖ್ಯ ಪಾತ್ರಗಳಲ್ಲಿ ಜಯಮ್ಮ, ಹೊನ್ನಪ್ಪ ಭಾಗವತರ್, ನಾಟಕರತ್ನ ಜಿ. ಹೆಚ್. ವೀರಣ್ಣ.

ಗುಬ್ಬಿ ಯವರ

ಹೇಮರೆಡ್ಡಿ ಮಲ್ಲಮ್ಮ

KATAKA

KARNATAKA *Release..*

Printed by B S Iyengar, Bangalore City
Publisher—B. N Gupta Editor—M. Shivaram